ನಿಮ್ಮ ನಂಬಿಕೆಯ ಧ್ವನಿ
# ಧೈರ್ಯದ ದಾರಿ
EMAIL : dairyadadaari@gmail.com ಸಂಪುಟ: 01 ಸಂಚಿಕೆ: 66
ಬೆಲೆ ರೂ : 2.00
ರಾಯಚೂರು
ಪುಟ: 4
ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793
KANNADA DAILY NEWS PAPER
ಕನ್ನಡ ದಿನಪತ್ರಿಕೆ
DAIRYADA DAARI
RNI NO: KNKAN/25/A2795 ಭಾನುವಾರ: 15-02-2026

## ತಹಶಿಲ್ದಾರ ಭೀಮರಾಯ ಮಕ್ಕಳ ಮನೆ ಬೇಟಿ



ಧೈರ್ಯದ ದಾರಿ

**ಮಾನ್ವಿ,ಫೆ,14–** ತಾಲೂಕಿನ ಮದ್ಲಾಪುರ ಕಾತರಕಿ ಗ್ರಾಮದಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಓದು ಪರಿಶೀಲನೆಗಾಗಿ ಬೆಳ್ಳಂಬೆಳಿಗ್ಗೆ ಪ್ರತಿ ವಿದ್ಯಾರ್ಥಿಗಳನ್ನು ಬೇಟಿ ಮಾಡಿ ಅವರ ಓದು ಬಗ್ಗೆ ತಿಳಿದು ಅವರಿಗೆ ಪರೀಕ್ಷಾ ಭಯ ಹೊಗಲಾಡಿಸಿದರು, ಪ್ರಶ್ನೆ ಕೇಳಿ ಉತ್ತರ ಪಡೆದು ತಿಳಿಯ ವಿಷಯವನ್ನು ತಾವು ತಿಳಿಸಿ ಮಕ್ಕಳನ್ನು ಸ್ಫೂರ್ತಿಗೊಳಿಸಿದರು.

ಸಂಧರ್ಭದಲ್ಲಿ ಸಂಪನ್ಮೂಲ ವ್ಯಕ್ತಿ ಮಹಿಬೂಬ್ ಮದ್ಲಾಪೂರ, ಮುಖ್ಯೋಪಾಧ್ಯಾಯ ನಾಗಪ್ಪ, ಸಿ.ಆರ್.ಪಿ. ಕಾಶೀನಾಥ್ ಸ.ಶಿ. ದೇವಪ್ಪ, ಎಸ್ಡಿಎಂಸಿ ಅಧ್ಯಕ್ಷ ಬಸವರಾಜ್ ಇದ್ದರು.

# ರಾಜ್ಯವನ್ನು ದಿವಾಳಿ ಮಾಡುತ್ತಿರುವ, ಯೋಗ್ಯತೆ ಇಲ್ಲದ ಸರ್ಕಾರ : ವಜ್ಜಲ್

### ಸಾವಿರ ಹಗರಣದಿಂದ, ಸಾವಿರ ದಿನ ಪೂರೈಸಿದ ಕಾಂಗ್ರೆಸ್

ಧೈರ್ಯದ ದಾರಿ

**ಲಿಂಗಸೂಗೂರು,ಫೆ.14–** ರಾಜ್ಯವನ್ನು ದಿವಾಳಿ ಮಾಡಿ, ಸಾಲದ ಸುಳಿಯಲ್ಲಿ ಸಿಲುಕಿರುವ ರಾಜ್ಯ ಸರ್ಕಾರದ ಸಾವಿರ ದಿನಗಳ ಸಾಧನೆ ಶೂನ್ಯ ಸಾಧನೆ ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ಬಡ್ಜಟ್ ನಲ್ಲಿ ಘೋಷಣೆ ಮಾಡಿದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡದೆ ಕಲ್ಯಾಣ ಕರ್ನಾಟಕ ಭಾಗವನ್ನು ಸಂಪೂರ್ಣ ನಿರ್ಲಕ್ಷ ಮಾಡಿದೆ, ಪುನಃ ಬಡ್ಜಟ್ ಮಂಡನೆಗೆ ತಯಾರಾಗುತ್ತಿರುವ ರಾಜ್ಯ ಕಾಂಗ್ರೆಸ್ ಸಾಧನೆ ಶೂನ್ಯ ಸಾಧನೆಯಾಗಿದೆ. ಗ್ಯಾರಂಟಿ ಯೋಜನೆಗಳ ಹೆಸರಲ್ಲಿ ರಾಜ್ಯ ಸರ್ಕಾರ ಪ್ರತಿಯೊಬ್ಬ ಪ್ರಜೆಯ ಮೇಲೆ ಸಾಲದ ಹೊರೆ ಹಾಕುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನ್ನ ಮಾತಕ್ಷೇತ್ರದಲ್ಲಿ ಅಕ್ರಮ ಸಕ್ರಮಕ್ಕೆ 1200 ಅರ್ಜಿ ಗಳು




ಬಂದಿದ್ದು ಕೇವಲ 4 ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗಿದೆ ಇದರಿಂದ 30–40 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿರುವ ಬಡ ರೈತರಿಗೆ ಮಹಾ ಮೋಸ ಮಾಡಿದಂತಾಗಿದೆ. ಈಗಾಗಲೇ ದೂರದ ಮುಂಬೈ, ಪುಣೆ ಗಳಿಗೆ ಗುಳೆ ಹೋಗುತ್ತಿದ್ದಾರೆ. ಸರ್ಕಾರ ಈಗ ಏಕ ಏಕಿ ಜಮೀನುಗಳು ಅರಣ್ಯ ಇಲಾಖೆ ಸಂಬಂದಿಸಿದ್ದು ಎಂದು ಹೇಳಿದರೆ ಬಡ ರೈತರ ಪರಿಸ್ಥಿತಿ ಏನಾಗಬಹುದು ಎಂಬ ಕಿಚಿತ್ತು ಯೋಚನೆ ಇಲ್ಲದ ನಾಲಾಯಕ್ ಸರ್ಕಾರ ಇದು ಎಂದು ಹೇಳಿದರು. 2ನೇಪುಟಕ್ಕೆ

## ಸಿರವಾರದಲ್ಲಿ 'ವಾತ್ಸಲ್ಯ' ಮನೆ ಹಸ್ತಾಂತರ: ಧರ್ಮಸ್ಥಳ ಯೋಜನೆಯಿಂದ ಬಸಮ್ಮನವರ ಕನಸು ನನಸು




ಧೈರ್ಯದ ದಾರಿ

**ಸಿರವಾರ,ಫೆ.14–** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ವಾತ್ಸಲ್ಯ' ಕಾರ್ಯಕ್ರಮದಡಿಯಲ್ಲಿ ಸಿರವಾರ ಪಟ್ಟಣದ ವಿಜಯನಗರ ಕಾಲೋನಿಯ (ವಾರ್ಡ್ ನಂ. 06) ನಿವಾಸಿ ಬಸಮ್ಮ ಅವರಿಗೆ ಮಂಜೂರಾಗಿದ್ದ ನೂತನ ಮನೆಯನ್ನು ಅಧಿಕೃತವಾಗಿ ಹಸ್ತಾಂತರಿಸಲಾಯಿತು.
ವಿವರ: ಸುಮಾರು 1,35,000/– ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಈ ಮನೆಯ ಕಾಮಗಾರಿ ಪೂರ್ಣಗೊಂಡ ಹಿನ್ನೆಲೆಯಲ್ಲಿ, ಯೋಜನೆಯ ಕೊಪ್ಪಳ ಪ್ರಾದೇಶಿಕ ವಿಭಾಗದ ನಿರ್ದೇಶಕರಾದ ಶ್ರೀ ಜೆ. ಚಂದ್ರಶೇಖರ ಅವರು ಫಲಾನುಭವಿ ಬಸಮ್ಮ ಅವರಿಗೆ ಮನೆಯನ್ನು ಹಸ್ತಾಂತರಿಸಿ ಶುಭ ಕೋರಿದರು.
ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಶಯದಂತೆ ಹಸಿದವರಿಗೆ ಅನ್ನ, ಅಶಕ್ತರಿಗೆ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಈ ಯೋಜನೆ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು.

**ಗಣ್ಯರ ಉಪಸ್ಥಿತಿ:**
ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಆಜಿ ಚೌದರಿ, ಉಪಾಧ್ಯಕ್ಷರಾದ ಲಕ್ಷ್ಮೀ ಆದಪ್ಪ, ಜಿಲ್ಲಾ ನಿರ್ದೇಶಕ ರಾಘವೇಂದ್ರ ಪಟಗಾರ, ಹಾಗೂ ಪಟ್ಟಣ ಪಂಚಾಯತ್ ಮಾಜಿ ಅಧ್ಯಕ್ಷ ವೈ. ಭೂಪನಗೌಡ ಉಪಸ್ಥಿತರಿದ್ದರು.
ಜಿಲ್ಲಾ ಜನಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಅಮರೇಶ್ ಮಸ್ಕಿ, ಜಿಲ್ಲಾ ವೇದಿಕೆ ಕೋಶಾಧಿಕಾರಿ ಅಯ್ಯನಾಗೌಡ ಎರೆಡ್ಡಿ, ವೇದಿಕೆ ಸದಸ್ಯ ಜ್ಞಾನಮಿತ್ರ, ತಾಲೂಕು ಯೋಜನಾಧಿಕಾರಿ ಚಂದ್ರಹಾಸ, ಲಯನ್ಸ್ ಕ್ಲಬ್ ಅಧ್ಯಕ್ಷ ಜಿ. ವೀರೇಶ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹನುಮೇಶ್, ಪತ್ರಕರ್ತರಾದ ಸುರೇಶ್ ಹೀರಾ ಸೇರಿದಂತೆ ಇತರ ಮಾಧ್ಯಮ ಪ್ರತಿನಿಧಿಗಳು ಪಾಲ್ಗೊಂಡಿದ್ದರು.
ಇದೇ ವೇಳೆ ಜ್ಞಾನವಿಕಾಸ ಸಮನ್ವಯಾಧಿಕಾರಿ ಯಶೋಧ, ಮೇಲ್ವಿಚಾರಕಿ ವನಿತಾ, ವಿವಿಧ ಸೇವಾ ಪ್ರತಿನಿಧಿಗಳು, ಅಖಿಲ ಸೇವಾದಾರರು ಹಾಗೂ ವಿಜಯನಗರ ಕಾಲೋನಿಯ ಸಾರ್ವಜನಿಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

## ಗಾರಿಗೆ ಜಾತ್ರೆ ಅಂಗವಾಗಿ ಮಹಿಳೆಯರಿಗಾಗಿ ನಡೆದ ದೇಸಿ ಕ್ರೀಡೆಗಳ ಸ್ಪರ್ಧೆ

ಧೈರ್ಯದ ದಾರಿ

**ಮಾನ್ವಿ,ಫೆ.14–** ಪಟ್ಟಣದ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ನಡೆದ ಗಾರಿಗೆ ಜಾತ್ರೆ ಕಾರ್ಯಕ್ರಮ ಅಂಗವಾಗಿ ನಡೆದ ಮಹಿಳಾ ದೇಶಿ ಕ್ರೀಡಾ ಸ್ಪರ್ಧೆಗಳಿಗೆ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಮಿಗಳು ಚಾಲನೆ ನೀಡಿ ಮಾತನಾಡಿ ನಮ್ಮ ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಾಗಿ ಭಾಗವಹಿಸುತ್ತಿದ್ದ ದೇಸಿ ಕ್ರೀಡೆಗಳು ಅಧುನಿಕತೆಯ ಹೆಸರಿನಲ್ಲಿ ಕಣ್ಮರೆಯಾಗುತ್ತಿವೆ ಅವುಗಳನ್ನು ಪುನಃ ಜನಪ್ರಿಯ ಗೊಳ್ಳಿಸುವ ಮೂಲಕ ಮೂಲ ದೇಸಿಯ ಕ್ರೀಡೆಗಳನ್ನು ಉಳಿಸುವ ಹಾಗೂ ಮುಂದಿನ ಪಿಳಿಗೆಗೆ ಪರಿಚಯಿಸುವ ಕಾರ್ಯವನ್ನು ಗಾರಿಗೆ ಜಾತ್ರೆ ಮೂಲಕ ಪ್ರತಿವರ್ಷ ಕಲ್ಮಠವು ವಿಶೇಷವಾಗಿ ಮಹಿಳೆಯ ರಿಗಾಗಿ ದೇಸಿ ಕ್ರೀಡೆಗಳ ಸ್ಪರ್ಧೆಯನ್ನು ಆಯೋಜಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು.
ನಂತರ ಧ್ಯಾನ ಮಂದಿರದ ಅವರಣದಲ್ಲಿ ಮಹಿಳೆಯರಿಗಾಗಿ ಅಯೋಜಿಸಲಾದ ದೇಸಿ ಕ್ರೀಡ ಸ್ಪರ್ಧೆಗಳಲ್ಲಿ ಮಹಿಳೆಯರು ಉತ್ಸಹದಿಂದ ಭಾಗವಹಿಸಿದರು.
ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಕು.ಶೃತಿ ತಂಡದ ಸದಸ್ಯರು ಪಡೆದುಕೊಂಡರು,ದ್ವಿತಿಯ ಸ್ಥಾನವನ್ನು ರಮಮಾಣಿ ಸತ್ಯನಾರಾಯಣ ತಂಡದವರು ಪಡೆದುಕೊಂಡರು. ನಿಂಬೆಹಣ್ಣು ಚಮಚ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಸುಶ್ಮಿತಾ, ದ್ವಿತಿಯ ಸ್ಥಾನ ವನ್ನು ರಾಧ, ತೃತೀಯ ಸ್ಥಾನವನ್ನು ರಮಮಾಣಿ ಹಾಗೂ ಪುಷ್ಪವತಿ ಜಂಟಿಯಾಗಿ ಹಂಚಿಕೊಂಡರು. ಕೊಡ ಹೊತ್ತು ಓಡುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಶಿವಲೀಲಾ, ದ್ವಿತಿಯ ಸ್ಥಾನ ವನ್ನು ಬಸವರಾಜೇಶ್ವರಿ, ತೃತೀಯ ಸ್ಥಾನವನ್ನು ನಿರ್ಮಲ ಪಡೆದುಕೊಂಡರು.




ಕಲ್ಯಾಣ ಮಂಟಪದ ಒಳಗಡೆ ನಡೆದ ರಂಗೋಲಿ ಸ್ಪರ್ಧೆಯಲ್ಲಿ 12 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ ಮನಮೋಹಕವಾದ ಜಾತ್ರೆ,ಶಿವಪಾರ್ವತಿ ಸೇರಿದಂತೆ ವಿವಿಧ ರಂಗೋಲಿಗಳನ್ನು ಬಿಡಿಸಿದರು. ರಂಗೋಲಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪದ್ಮವತಿ, ದ್ವಿತಿಯ ಸ್ಥಾನ ಶೃತಿ,ತೃತೀಯ ಸ್ಥಾನ ಭಾಗ್ಯಶ್ರೀ ಹಾಗೂ ಶ್ರಾವಣಿ.ಪಡೆದುಕೊಂಡರು.
ಸ್ಪರ್ಧೆಗಳ ಉಸ್ತುವರಿಯನ್ನು ದೈಹಿಕ ಶಿಕ್ಷಕರಾದ ಕೆಮ್ಯಾನಾಯಕ, ಭ್ರಮರಾಂಭ,ಮಲಕಪ್ಪ ಯಾಳವಾರ, ಬಿ.ನರಸಿಂಹಲು, ರೂಪಾ,ಪವಿತ್ರಾ,ಪ್ರಭಾವತಿ,ಮಿರ್ಮಾಲ ವಹಿಸಿದರು.
ನೀಲಗಲ್ ಬೃಹನ್ಮಠದ ಅಭಿನವ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು , ರಾಯಚೂರು ಮಂಗಳವಾರ ಪೇಟೆಯ ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಇದ್ದರು.

## ಸಿರವಾರ: ಪಟ್ಟಣದ ಶ್ರೀ ಮಹಾಮುನಿ ಸ್ವಾಮಿ ಪಲ್ಲಕ್ಕಿ ಮಹೋತ್ಸವ: ಸಿದ್ದಯ್ಯ ಸ್ವಾಮಿ

ಧೈರ್ಯದ ದಾರಿ

**ಸಿರವಾರ,ಫೆ.14–** ಸುಕ್ಷೇತ್ರ ಶ್ರೀ ಷ.ಚ ಮಹಾಮುನಿ ಸ್ವಾಮಿ ಶ್ರೀ ಅನ್ನದಾನೇಶ್ವರ ಸ್ವಾಮಿ ಆರೂಢ ಮ್ಯಾಗಳ ಮಠದಲ್ಲಿ ಸೋಮವಾರದಿಂದ 2ದಿನಗಳವರೆಗೆ ಶಿವರಾತ್ರಿ ಅಂಗವಾಗಿ ಪಲ್ಲಕ್ಕಿ ಮಹೋತ್ಸವದೊಂದಿಗೆ ಅನೇಕ ಪೂಜಾ ಕಾರ್ಯ ಕ್ರಮಗಳು ಜರುಗಲಿವೆ ಎಂದು ಮಠದ ಪೂಜ್ಯರಾದ ಸಿದ್ದಯ್ಯ ಸ್ವಾಮಿ ಗುರುಗಳು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವರಾತ್ರಿ ಮಹಾ ಹಬ್ಬದ ವಿಶೇಷವಾಗಿ ಜಿಲ್ಲೆಯ ವಿವಿಧ ನಗರ, ಗ್ರಾಮಗಳಿಂದ ಮ್ಯಾಗಳ ಮಠದ ಭಕ್ತರು ಸಿರವಾರ ಪಟ್ಟಣದ ವಿದ್ಯಾನಗರದಲ್ಲಿರುವ ಶ್ರೀ ಷ.ಚ ಮಹಾಮುನಿ ಸ್ವಾಮಿ ಶ್ರೀ ಅನ್ನದಾನೇಶ್ವರ ಸ್ವಾಮಿ ಆರೂಢ ಮಠದಲ್ಲಿ ಜರುಗುವ ಪೂಜಾ ಕಾರ್ಯಕ್ರಮಗಳಾದ ನಗಾರಿ ಪೂಜೆ, ನೈವೇದ್ಯ, ಭಜನೆ ಕಾರ್ಯಕ್ರಮ ಹಾಗೂ ಮಂಗಳವಾರ ಪಲ್ಲಕ್ಕಿ ಮಹೋತ್ಸವ ಮತ್ತು ಬಸವಣ್ಣನವರ ವಚನಗಳನ್ನು ನುಡಿಯಲಾಗುವುದು, ಮತ್ತು ಧೂಳ್ಗಾಯಿ ನಂತರ ಮಧ್ಯಾಹ್ನ ಮಹಾ ಪ್ರಸಾದ. ರಾತ್ರಿ ನುಡಿಮನೆ ಪ್ರವೇಶ ಕಾರ್ಯಕ್ರಮಗಳು ನಡೆಯುವ ಕಾರಣ ಸಮಸ್ತ ಮಹಾಮುನಿ ಸ್ವಾಮಿಯ ಭಕ್ತರು ಪಲ್ಲಕ್ಕಿ ಮಹೋತ್ಸವದಲ್ಲಿ ಭಾಗವಹಿಸಿ ದೇವರ ಪ್ರೀತಿಗೆ



ಪಾತ್ರರಾಗಬೇಕೆಂದುಸ್ವಾಮಿಗಳು ಸ್ವಾಗತ ಕೋರಿದರು.

ಈ ಸಂದರ್ಭದಲ್ಲಿ ಮಹಾಮುನಿ ಸ್ವಾಮಿ ಮ್ಯಾಗಳ ಮಠದ ಸ್ವಾಮಿಗಳಾದ ಆನಂದ ಸ್ವಾಮಿ, ಅಯ್ಯಣ್ಣ ಸ್ವಾಮಿ, ಮುದ್ದಯ್ಯ ಸ್ವಾಮಿ, ಚನ್ನಬಸವ ಸ್ವಾಮಿಗಳ ನೇತೃತ್ವದಲ್ಲಿ ಪಲ್ಲಕ್ಕಿ ಮಹೋತ್ಸವ ಕಾರ್ಯಕ್ರಮ ಜರುಗಿಸಲಾಗುವುದು.

## ತಾಲೂಕು ಆಡಳಿತದಿಂದ ವಿವಿಧ ಜಯಂತಿಗಳ ಪೂರ್ವ ಭಾವಿ ಸಭೆ




ಧೈರ್ಯದ ದಾರಿ

**ಮಾನ್ವಿ,ಫೆ.14–** ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಡೆದ ವಿವಿಧ ಜಯಂತಿಗಳ ಪೂರ್ವ ಭಾವಿ ಸಭೆಯಲ್ಲಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಮಾತನಾಡಿ ತಾಲೂಕು ಆಡಳಿತದಿಂದ ತಾಲೂಕಿನ ವಿವಿಧ ಸಮುದಾಯಗಳ ಸಹಯೋಗದಲ್ಲಿ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಅವರ ಜೀವನ ಹಾಗೂ ತತ್ವ ಅದರ್ಶಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಮಹಾನಿಯರ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಫೆ.15 ರಂದು ಸಂತಸೇವಾಲಾಲ್ ಜಯಂತಿ, ಫೆ.19 ರಂದು ಛತ್ರಪತಿ ಶಿವಾಜಿ ಜಯಂತಿ, ಫೆ.20 ರಂದು ಸಂತ ಕವಿ ಸರ್ವಜ್ಞ ಜಯಂತಿ, ಮಾ.1 ರಂದು ಶ್ರೀ ರೇಣುಕಾಚಾರ್ಯ ಜಯಂತಿ, ಮಾ.3 ರಂದು ಶ್ರೀ ಯೋಗಿ ನಾರೇಯಣಯತೀಂದ್ರರ ಜಯಂತಿಗಳನ್ನು ತಾಲೂಕು ಆಡಳಿತ ಹಾಗೂ ಸಮುದಾಯಗಳ ಸಹಭಾಗಿತ್ವದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಮಹಾತ್ಮರ ಕುರಿತು ಉಪನ್ಯಾಸಕರಿಂದ ಉಪನ್ಯಾಸ, ಸಮುದಾಯಗಳಲ್ಲಿ ಉತ್ತಮ ಸಾಧನೆಯನ್ನು ತೋರಿದ ಸಾಧಕರಿಗೆ ತಾಲೂಕು ಆಡಳಿದಿಂದ ಸನ್ಮಾನಿಸಿ ಗೌರವಿಸಲಾಗುವುದು. ತಾಲೂಕಿನ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಸರ್ಕಾರಿ ಜಯಂತಿಗಳನ್ನು ಆಚರಿಸಿ ನಂತರ ತಾಲೂಕು ಆಡಳಿತದಿಂದ ನಡೆಯುವ ಜಯಂತಿ ಕಾರ್ಯಕ್ರಮ ಗಳಲ್ಲಿ ಭಾಗವಹಿಸುವಂತೆ ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ, ಪುರಸಭೆ ಆರೋಗ್ಯ ನಿರೀಕ್ಷಕರಾದ ಮಹೇಶ ಕುಮಾರ, ತಾ.ವೀರಶೈವ ಲಿಂಗಾಯತ ಸಮಾಜದ ತಾ,ಅಧ್ಯಕ್ಷರಾದ ಹರಿಹರಪಾಟೀಲ್, ಗೌ.ಆಧ್ಯಕ್ಷರಾದ ಶ್ರೀಧರಸ್ವಾಮಿ, ಅ.ಭಾ.ವೀ.ಲಿಂ. ಮಹಾಸಭ ತಾಲೂಕು ಘಟಕದ ಅಧ್ಯಕ್ಷರಾದ ಅರುಣಚಂದಾ,ದೊಡಪ್ಪ ಹೂಗಾರ, ಜಗದೀಶ್ ಓತ್ತೂರ್,ಮೌನೇಶ ರಾಠೋಡ್, ಕೃಷ್ಣ ಜಾದನ್,ಚೇತನ್ ನಾಯಕ ವಕೀಲರು, ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದರು.

ಮೊದಲನೇ ಪುಟದಿಂದ

# ರಾಜ್ಯವನ್ನು ದಿವಾಳಿ ಮಾಡುತ್ತಿರುವ, ಯೋಗ್ಯತೆ ಇಲ್ಲದ ಸರ್ಕಾರ : ವಜ್ಜಲ್


ಭ್ರಷ್ಟಾಚಾರದ ಪಿತಾಮಹ ಕಾಂಗ್ರೆಸ್ ಸರ್ಕಾರ – ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಅಭಿವೃದ್ಧಿ ಮಾಡದೆ ಜನರ ಜೋಬಿಗೆ ಕತ್ತರಿ ಹಾಕುವ ಕೆಲಸ ಮಾಡುತ್ತಿದೆ. ಮೂಡ ಹಗರಣ, ವಾಲ್ಮೀಕಿ ನಿಗಮ, ವಕ್ಫ, ಅಬಕಾರಿ ಇಲಾಖೆಯಲ್ಲಿ, ಸ್ಮಾರ್ಟ್ ಮೀಟರ್ ಹಗರಣ, ಅನ್ನಭಾಗ್ಯ ಅಕ್ಕಿ ಕಾಲಸಂತೆಯಲ್ಲಿ ಮಾರಾಟ, ಬಿಪಿ ಎಲ್ ನಿಂದ ಎ ಪಿ ಎಲ್ ಕಾರ್ಡ್ ವರ್ಗಾವಣೆ ಮಾಡಿ ಜನರನ್ನು ಗೊಂದಲಗೋಳಿಸಿದ್ದು, ವಸತಿ ಯೋಜನೆಗಳಲ್ಲಿ ಮೀಸಲಾತಿ, ಮಹಿಳಾ ಅಧಿಕಾರಿಗಳ ಮೇಲೆ ಕೊಲೆ ಬೆದರಿಕೆ, ಎ ಟಿ ಎಂ ಹಣ ದರೋಡೆಗಳು, ಈಗೆ ಹೇಳುತ್ತಾ ಹೋದರೆ ಕಾಂಗ್ರೆಸ್ ಸರ್ಕಾರದ ಸಾವಿರ ಹಗರಣಗಳನ್ನು ಹೇಳಬಹುದು ಎಂದು ತಿಳಿಸಿದರು.

ನಾರಾಯಣಪುರ ಡ್ಯಾಮನಿಂದ ಬೇರೆ ಜಿಲ್ಲೆಗೆ ನೀರು ಕೊಡುತ್ತಿದ್ದೂ ಪಕ್ಕದ ನಮ್ಮ ಲಿಂಗಸೂಗೂರು ತಾಲೂಕಿಗೆ ಕುಡಿಯುವ ನೀರಿನ ಸಮರ್ಪಕ ಸರಬರಾಜು ಮಾಡುವಲ್ಲಿ ತಾರತಮ್ಯ ಮಾಡುತ್ತಿರು ವ ಯೋಗ್ಯತೆ ಇಲ್ಲದ ರಾಜ್ಯ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ಅಹ್ವಾನ :ತಾಲೂಕಿನ ಗೆಜ್ಜೆಲಗಟ್ಟ ಗ್ರಾಮದಲ್ಲಿ ಫೆ 15 ರಿಂದ ಫೆ 20 ರವರೆಗೆ ವೀರಾನಾಗಮ್ಮ ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಗಿದ್ದು, ಪ್ರತಿ ದಿನ ಸಂಜೆ ರಾಜ್ಯದ ಪ್ರತಿಷ್ಠಿತ ಗಾಯಕರಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ, ಮತ್ತು ಧಾರ್ಮಿಕ ಕಾರ್ಯಕ್ರಮಕ್ಕೆ ಕೇಂದ್ರ ಹಾಗೂ ರಾಜ್ಯದ ಸಚಿವರು ಆಗಮಿಸುತ್ತಿದ್ದು ತಾಲೂಕಿನ ಜನ ಈ ಒಂದು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೊಷ್ಟಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ್, ಮುಖಂಡರಾದ ಅಯ್ಯಪ್ಪ ಮಾಳೂರು,ಕೆ ನಾಗಭೂಷಣ್, ಮುದುಕಪ್ಪ ನಾಯಕ, ಬೀಮಶೇನ್ ಕುಲಕರ್ಣಿ,ಇದ್ದರು.

# ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ವತಿಯಿಂದ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನ



ಧೈರ್ಯದ ದಾರಿ

**ಮಾನ್ವಿ,ಫೆ.14–** ಪಟ್ಟಣದ ಈಶ್ವರ ದೇವಸ್ಥಾನದ ಹತ್ತಿರದ ಬಯಲು ಜಾಗದಲ್ಲಿ ಶಿವರಾತ್ರಿ ಅಂಗವಾಗಿ ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾನ್ವಿ ಶಾಖೆಯಿಂದ ಅಯೋಜಿಸಲಾದ ಸನಾತನ ಭಾರತದ ಪುರಾಣ ಪ್ರಸಿದ್ಧ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನವನ್ನು ಉಮಳಿ ಹೊಸೂರು ಕಿಡಿಗಣ್ಣಯ್ಯ ಸ್ವಾಮಿಗಳು ಧರ್ಮ ಧ್ವಜಾರೋ ಹಣವನ್ನು ನೇರವೇರಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಶಿವರಾತ್ರಿ ಹಿಂದೂಗಳಿಗೆ ಅತ್ಯಂತ ಪವಿತ್ರವಾದ ದಿನವಾಗಿದ್ದು ಶಿವರಾತ್ರಿ ಯಂದು ಉಪವಾಸದಿಂದ ಜಾಗರಣೆಯನ್ನು ಆಚರಿಸಿದಲ್ಲಿ ಶಿವನ ಕೃಪೆಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಅದ್ದರಿಂದ ಪ್ರತಿಯೊಬ್ಬರು ಶಿವರಾತ್ರಿ ದಿನ ಶಿವನನ್ನು ಭಕ್ತಿ ಭಾವದಿಂದ ಪೂಜಿಸುವಂತೆ ತಿಳಿಸಿದರು.

ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಮಾನ್ವಿ ಶಾಖೆಯ ಸಂಚಾಲಕರಾದ ಅಕ್ಕಮಕ್ಕ ಮಾತನಾಡಿ ಪವಿತ್ರವಾದ ಶಿವರಾತ್ರಿಯಂದು ದೇಶದ 12 ಕ್ಷೇತ್ರಗಳಲ್ಲಿ ಶಿವನು ಸ್ವಯಂಭುವಾಗಿ ನೆಲೆಸಿ ಭಕ್ತರಿಗೆ ದರ್ಶನವನ್ನು ನೀಡುತ್ತಿರುವ ಭಾರತದ ಪುರಾಣ ಪ್ರಸಿದ್ಧ 12 ಜ್ಯೋತಿರ್ಲಿಂಗಗಳ ದಿವ್ಯ ದರ್ಶನವನ್ನು ಭಕ್ತರಿಗೆ ಮಾಡಿಸುವ ಉದ್ದೇಶದಿಂದ 12 ಜ್ಯೋತಿರ್ಲಿಂಗಗಳ ಪ್ರತಿರೂಪಗಳನ್ನು ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಓಂ.ಮಂಡಳಿ ಶಿವಶಕ್ತಿ ಅವತಾರ್ ಸೇವಾ ಸಂಸ್ಥಾನ್ ಶಿಖಾರಿಪುರ ಶಾಖೆಯ ಸಂಚಾಲಕರಾದ ಮಂಜುನಾಥ, ಮಾನ್ವಿಯ ಎಂ.ಎಂ. ಹಿರೇಮಠ ಸೇರಿದಂತೆ ಪರಿವಾರದ ಸದಸ್ಯರು ಭಾಗವಹಿಸಿದರು.

# ಗಾಂಜಾ ಪೆಡ್ಲರ್ ದೌಲ ಮತ್ತೆ ಜೈಲಿಗೆ

**ಬಳ್ಳಾರಿ, ಫೆ.14:** ನಗರದ ಕುಖ್ಯಾತ ಗಾಂಜಾ ಪೆಡ್ಲರ್ ದೌಲನನ್ನು ಮಾದಕ ವಸ್ತುಗಳ ಮಾರಾಟ ನಿಷೇಧ ಪ್ರಕರಣದಲ್ಲಿ ಪೊಲೀಸರು ಬಂಧಿಸಿ ನಿನ್ನೆ ಜೈಲಿಗೆ ಕಳುಹಿಸಿದ್ದಾರೆ.

ಕಳೆದ 15 ವರ್ಷಗಳಿಂದ ದೌಲ ಗಾಂಜಾ ಮಾರಾಟದ ಅನೇಕ ಪ್ರಕರಣಗಳಲ್ಲಿ ಬಂಧನ ಆಗುವುದು ಜಾಮೀನು ಪಡೆಯುವುದು. ಮತ್ತೆ ಗಾಂಜಾ ಮಾರಾಟ ಮಾಡುವುದು ಮತ್ತೆ ಬಂಧನ. ಮತ್ತೆ ಜಾಮೀನು ಪಡೆಯುವುದು. ಪದೇ ಪದೇ ಹೀಗೆ ಮಾಡುತ್ತ ಬಂದಿದ್ದ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಬಳ್ಳಾರಿ ವಲಯದ ಐಜಿಪಿ ಡಾ.ಹರ್ಷ ಅವರು. ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಣಿಕೆ ಮಾಡುವುದರಲ್ಲಿ ನಿಷ್ಣಾತನಾಗಿದ್ದ. ನಗರದ ರಾಣಿತೋಟ ನಿವಾಸಿ ಈ ಡಿ.ದೌಲ ಅಲಿಯಾಸ್ ಮೆಹಬೂಬ್ ದೌಲ. ಅಂತರ ರಾಜ್ಯ ಗಾಂಜ್ ಗಿರಾಕಿಯ ಜಾಲ ಹೊಂದಿದ್ದ. ರಾಜ್ಯದ ಮೈಸೂರು, ತುಮಕೂರು, ಚಿತ್ರದುರ್ಗ ಬಳ್ಳಾರಿ ಸೇರಿದಂತೆ ವಿವಿದ ಜಿಲ್ಲೆಗಳಲ್ಲಿ ಈತನ ವಿರುದ್ದ ಮಾದಕ ವಸ್ತುಗಳನ್ನು ತರುವದು , ಶೇಖರಣೆ ಮಾಡುವುದು, ಮಸರಾಟ ಮಾಡುವ ಕುರಿತು ಕ್ರಿಮಿನಲ್ ಪ್ರಕರಣ ದಾಖಲಾಗಿದ್ದವು. ಎಷ್ಟೇ ಬಾರಿ ಬಂಧನ ಮಾಡಿದರೂ ಆತ ತನ್ನ ಹಗ್ಗ ಕಡಿಯುವ ಚಾಳಿ ನಿಲ್ಲಿಸಿರಲಿಲ್ಲ. ಈತನ ದಂಧೆಯಿಂದ ಅಮಾಯಕ ಯುವ ಜನತೆ ಡ್ರಗ್ಸ್ ಸೇವನೆ ಚಟಕ್ಕೆ ಬಲಿಯಾಗುತ್ತಿದ್ದರು.

ಇದರಿಂದಾಗಿ 21 ಎನ್ಡಿಪಿಎಸ್ ಪ್ರಕರಣಗಳು ಈತನ ವಿರುದ್ದ ದಾಖಲಾಗಿದ್ದವು. ಅದರಲ್ಲಿ ಇನ್ನೂ 12 ಪ್ರಕರಣ ವಿಚಾರಣಾ ಹಂತದಲ್ಲಿ ನ್ಯಾಯಾಲಯದಲ್ಲಿ ಬಾಕಿ ಇವೆ. ಆದ್ದರಿಂದ ಸಾಮಾನ್ಯ ಕ್ರಿಮಿನಲ್ ಕಾನೂನು ಮಾತ್ರ ಸಾಕಾಗದ ಸಂದರ್ಭಗಳಲ್ಲಿ ಈತನ ವಿರುದ್ದ ಪಿಐಟಿ ಎನ್ಡಿಪಿಎಸ್ ಕಾಯ್ದೆ (1988) ರ ಪ್ರಕಾರ ಮುಂದಿನ ಅನಧಿಕೃತ ಮಾದಕ ದ್ರವ್ಯ ವಹಿವಾಟನ್ನು ತಡೆಯಲು ಎಸ್ಪಿ ಡಾ ಸುಮನ್ ಅವರ ತಂಡ ಬಂಧಿಸಿ ಜೈಲಿಗೆ ಕಳುಹಿಸಿದೆ ಎಂದು ತಿಳಿಸಿದ್ದಾರೆ.

ನಮ್ಮ ಬಳ್ಳಾರಿ ವಲಯದಲ್ಲಿ ಯಾರೇ ಆಗಲಿ ಸಮಾಜ ಘಾತುಕ ಕೃತ್ಯಗಳಲ್ಲಿ ತೊಡಗಿದರೆ ಮುಲಾಜಿಲ್ಲದೆ ಕಠಿಣ ಕ್ರಮ ತೆಗೆದುಕೊಳ್ಳಲಿದೆ ಎಂದಿದ್ದಾರೆ.



**ಹಿನ್ನಲೆ:** ಈ ದೌಲ ತನ್ನ ಗಾಂಜಾ ದಂಧೆಗಾಗಿ ಸ್ಥಳೀಯ ರಾಜಕಾರಣಿಗಳ ಕೃಪಾ ಕಟಾಕ್ಷ ಪಡೆಯುತ್ತಿದ್ದ.ಅವರ ಬಳಿ ಹೋಗಿ ಪೋಟೋ ತೆಗೆದುಕೊಂಡು ಪೊಲೀಸರಿಂದ ರಕ್ಷಣೆ ಪಡೆಯುತ್ತಿದ್ದ.ಹಾಲಿ ಮಗರ ಶಾಸಕ ಭರತ್ ರೆಡ್ಡಿ ಜೊತೆ ಕುಳಿತುಕೊಂಡು ಅದನ್ನು ದೌಲ ತನ್ನ ಫೇಸ್ಬುಕ್ ನಲ್ಲಿ ಹಾಕಿಕೊಂಡಿದ್ದನ್ನು ಗಂಗಾವತಿ ಶಾಸಕ ಜನಾರ್ಧನರೆಡ್ಡಿ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದರು.ನಂತರ ಶಾಸಕ ಭರತ್ ರೆಡ್ಡಿ ಬೆಂಬಲಿಗರು ಬಿಜೆಪಿ ಮಾಜಿ ಶಾಸಕ ಸೋಮಶೇಖರ ರೆಡ್ಡಿ ಜೊತೆ ಇರುವ ಪೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಿದ್ದರು.
ಅನೇಕ ಬಾರಿ ಈತ ಮತ್ತು ಈತನ ಸಹಚರರನ್ನು ಬಂಧನ ಮಾಡಿದಾಗ ಕೆಲ ಮಾಧ್ಯಮದವರೂ ಪೊಲೀಸ್ ಠಾಣೆಗಳಿಗೆ ಹೋಗಿ ಪೊಲೀಸ್ ಅಧಿಕಾರಿಗಳಿಗೆ ಪ್ರಕರಣ ದಾಖಲಿಸದಂತೆ ಪ್ರಭಾವ ಬೀರಿದ್ದರಂತೆ.

ಒಟ್ಟಾರೆ ಈ ಗಾಂಜಾ ದೌಲನನ್ನು ಬಂಧಿಸುವ ಮೂಲಕ ಐಜಿಪಿ ಹರ್ಷ, ಎಸ್ಪಿ ಡಾ. ಸುಮನ್ ಅವರ ತಂಡ ಗಾಂಜಾದ ಅಕ್ರಮ ಮಾರಾಟ ಜಾಲಕ್ಕೆ ಕಡಿವಾಣ ಹಾಕಲು ಮುಂದಾಗಿರುವುದು ಯುವ ಸಮೂಹ ಹಾಳಾಗುವುದನ್ನು ತಡೆದಂತಾಗಿದೆ ಎನ್ನಬಹುದು.

# ಚಿಕ್ಕೋಡಿ ಸರ್ಕಾರಿ ಶಾಲೆಗೆ ನೀರಿನ ಸಮಸ್ಯೆ ವಿದ್ಯಾರ್ಥಿಗಳ ಗೋಳಾಟ ನೀರಿಲ್ಲದೆ ದೂರದ ಸ್ಥಳಕ್ಕೆ ತೆರಳುವ ಪರಿಸ್ಥಿತಿ ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

ಧೈರ್ಯದ ದಾರಿ

**ಚಿಕ್ಕೋಡಿ,ಫೆ.14–** ಕುಡಿಯುವ ನೀರಿನ ಸಮಸ್ಯೆಯಿಂದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿರುವ ಘಟನೆ ಬೆಳಕಿಗೆ ಬಂದಿದೆ. ವಡ್ರಾಳ ಗ್ರಾಮದಲ್ಲಿ ಇರುವ ಸರ್ಕಾರಿ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ತೀವ್ರವಾಗಿದೆ. ಚಿಕ್ಕೋಡಿ ತಾಲೂಕು ವ್ಯಾಪ್ತಿಯ ಈ ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲದ ಕಾರಣ, ನೀರು ಬೇಕಾದರೆ ದೂರದ ಸ್ಥಳಕ್ಕೆ ತೆರಳಬೇಕಾದ ದುಸ್ಥಿತಿ ಎದುರಾಗಿದೆ. ಬಿಸಿ ಊಟ ತಯಾರಿಸಲು ಸಹ ಸಿಬ್ಬಂದಿಗಳೇ ಹೊರಗಿನಿಂದ ನೀರು ತಂದುಕೊಳ್ಳಬೇಕಾಗಿದೆ.
ಇದಷ್ಟೇ ಅಲ್ಲದೆ, ವಿದ್ಯಾರ್ಥಿಗಳಿಗೆ ಸರಿಯಾದ ಶಾಲಾ ಕೊಠಡಿಗಳ ವ್ಯವಸ್ಥೆಯೂ ಇಲ್ಲ. ಕೆಲ ತರಗತಿಗಳಲ್ಲಿ ನೆಲಕ್ಕೆ ಟೈಲ್ಸ್ ಇಲ್ಲದೆ ಧೂಳಿನಲ್ಲೇ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಳೆಗಾಲದಲ್ಲೂ ಹಾಗೂ ಬೇಸಿಗೆಯಲ್ಲೂ ಈ ಪರಿಸ್ಥಿತಿ ಮತ್ತಷ್ಟು ಕಷ್ಟಕರವಾಗುತ್ತಿದೆ.
ನೀರಿನ ಸಮಸ್ಯೆ ಪರಿಹರಿಸುವಂತೆ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.
ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಈ ಗ್ರಾಮದಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ವಿದ್ಯಾರ್ಥಿಗಳು ನಮ್ಮ ದಿನಪತ್ರಿಕೆ ಮೂಲಕ ಮನವಿ ಮಾಡಿಕೊಂಡಿದ್ದಾರೆ.






"ನಮಗೂ ಕುಡಿಯಲು ನೀರು ಕೊಡಿ" ಎಂಬ ಅವರ ಮನವಿ ಅಧಿಕಾರಿಗಳ ಗಮನ ಸೆಳೆಯಬೇಕಾಗಿದೆ.
ಇನ್ನಾದರೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಎಚ್ಚೆತ್ತುಕೊಂಡು ಶಾಲೆಯ ಅಭಿವೃದ್ಧಿಗೆ ಮುಂದಾಗಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ.

# ಫೆ.16ಕ್ಕೆ ಕಸಾಪ ಆಜೀವ ಸದಸ್ಯರ ಸಭೆ: ಶರಣಬಸವ ನೀರಮಾನ್ವಿ

ಧೈರ್ಯದ ದಾರಿ

**ಮಾನ್ವಿ,ಫೆ.14–** ಫೆ.28 ರಂದು ನೀರಮಾನ್ವಿ ಗ್ರಾಮದ ಸಿದ್ದಾರೂಢ ಮಠದ ಆವರಣದಲ್ಲಿ 11ನೇ ಮಾನ್ವಿ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲು ಈಚೆಗೆ ನಡೆದ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕಾರಣ

ಫೆ.16 (ಸೋಮವಾರ) ಬೆಳಿಗ್ಗೆ10ಗಂಟೆಗೆ ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲ್ಲೂಕಿನ



ಕಸಾಪ ಆಜೀವ ಸದಸ್ಯರ ಸಭೆಯನ್ನು ಕರೆಯಲಾಗಿದೆ. ಈ ಸಭೆಯಲ್ಲಿ ಎಲ್ಲಾ ಸದಸ್ಯರು , ಕನ್ನಡಪರ ಸಂಘಟನೆಗಳ ಮುಖಂಡರು ಮತ್ತು ಸಂಘ ಸಂಸ್ಥೆಗಳ ಪ್ರಮುಖರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕು ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶರಣಬಸವ ನೀರಮಾನ್ವಿ ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

# ವಿವಿಧ ಬೇಡಿಕೆಗಳ ಈಡೇರಿಸಲು ಕಾರ್ಮಿಕರ ಪ್ರತಿಭಟನೆ




**ಸುರಪುರ:ಫೆ.14:** ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಸರಕಾರಕ್ಕೆ ಆಗ್ರಹಿಸಿ (ಜೆಸಿಟಿಯು) ಕೇಂದ್ರೀಯ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.ಡಾ.ಬಿ.ಆರ್ ಅಂಬೇಡ್ಕರ್ ವೃತ್ತದಿಂದ ಪಟ್ಟಣದ ದರ್ಬಾರ ರಸ್ತೆ ಹನುಮಾನ್ ಟಾಕೀಸ್ ರಸ್ತೆ ಮಾರ್ಗವಾಗಿ ಮಹಾತ್ಮ ಗಾಂಧಿ ವೃತ್ತದವರೆಗೆ ಪ್ರತಿಭಟನೆ ಮೆರವಣಿಗೆ ನಡೆಯಿತು.

ನಂತರ ಮಹಾತ್ಮ ಗಾಂಧಿ ವೃತ್ತದಲ್ಲಿ ಬಹಿರಂಗ ಸಮಾವೇಶ ನಡೆಸಿ ಅನೇಕ ಮುಖಂಡರು ಮಾತನಾಡಿ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಹೆಚ್ಚುತ್ತಿರುವ ನಿರುದ್ಯೋಗ, ಆದಿವಾಸಿ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸಿ ತಿದ್ದುಪಡಿ ಮಾಡಲಾಗುತ್ತಿದೆ, ಎಂಟು ಗಂಟೆಯ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸಲಾಗುತ್ತಿದೆ ಎಂದು, ಹೊರಗುತ್ತಿಗೆ ಆಧಾರಿತ ನೇಮಕಾತಿಗಳು, ಬ್ಯಾಂಕುಗಳು, ಸಾರ್ವಜನಿಕ ಲಾಭದಾಯಕ ಉದ್ಯಮಗಳ ಖಾಸಗೀಕರಣ ಮಾಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಆರೋಪಿಸಿದರು, ಅಲ್ಲದೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮುಂದುವರಿಸಬೇಕು, ಕನಿಷ್ಠ ಕೂಲಿ, ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ, ಉದ್ಯೋಗ ಭದ್ರತೆ ಸ್ಕೀಮ್ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕು, ರಸ್ತೆ ಸಾರಿಗೆ ನೌಕರರ 38 ತಿಂಗಳ ಬಾಕಿ ವೇತನ ನೀಡಬೇಕು, ನಾಲ್ಕು ವರ್ಷಕ್ಕೊಮ್ಮೆ ನಡೆಸುವ ವೇತನ ಪರಿಷ್ಕರಣೆ, ಕಟ್ಟಡ ಕಾರ್ಮಿಕರ ಬೀದಿಬದಿ ವ್ಯಾಪಾರಿಗಳ ಬದುಕಿಗಾಗಿ ಆರ್ಥಿಕ ನೀತಿ ರೂಪಿಸಬೇಕು ಎನ್ನುವುದು ಸೇರಿದಂತೆ ವಿದ್ಯುತ್ ಕಾಯ್ದೆ ತಿದ್ದುಪಡಿ ಬೀಜ ಕಾಯ್ದೆ ಭೂ ಸ್ವಾಧೀನ ಕಾಯ್ದೆ ರದ್ದುಗೊಳಿಸಬೇಕು, ಕರ್ನಾಟಕ ರಾಜ್ಯ ಸರ್ಕಾರ ಲೇಬರ್ ಕೋಡ್ ಗಳಿಗೆ ನಿಯಮಾವಳಿ ರಚಿಸಬಾರದು ಎನ್ನುವ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದರು.

ನಂತರ ರಾಷ್ಟ್ರಪತಿಗಳಿಗೆ ಬರೆದ ಮನವಿ ಗ್ರೇಡ್ ಟು ತಹಸಿಲ್ದಾರ್ ಮಲ್ಲಯ್ಯ ದಂಡು ಅವರ ಮೂಲಕ ಸಲ್ಲಿಸಿದರು.
ಎರಡು ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆದು ಪ್ರತಿಭಟನೆ ನಡೆಸಿದ್ದರಿಂದ ವಾಹನಗಳ ಓಡಾಟಕ್ಕೆ ಅಡಚಣೆ ಉಂಟಾಯಿತು. ಪಿ ಐ ಉಮೇಶ್ ಎಂ ನೇತ್ರತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ದೇವೇಂದ್ರಪ್ಪ ಪತ್ತಾರ, ದಾವಲಸಾಬ್ ನದಾಫ್, ತಿಮ್ಮಯ್ಯ ತಳವಾರ, ಪ್ರಕಾಶ್ ಆಲ್ಹಾಳ, ಶೈಜಾದಿ ಬೇಗಮ್, ಬಸಮ್ಮ ಆಲಾಳ, ಅಯ್ಯಪ್ಪ ಅನಸೂರ, ಹನುಮಂತರಾಯ ಮಡಿವಾಳ, ಮಲ್ಲಪ್ಪ ಹುಬ್ಬಳ್ಳಿ, ಶ್ರೀದೇವಿ ದನ್ನೂರ, ಧರ್ಮಣ್ಣ ದೊರೆ, ನಸೀಮಾ ಮುದನೂರ, ಮಂಜುಳಾ ಕಲಕೇರಿ, ರಾಧಾಬಾಯಿ ಲಕ್ಷ್ಮಿಪುರ, ಯಲ್ಲಪ್ಪ ಅರಳಗುಂಡಗಿ ಸೇರಿದಂತೆ ನೂರಾರು ಜನ ಮಹಿಳಾ ಹೋರಾಟಗಾರರು ಭಾಗವಹಿಸಿದ್ದರು.

# ಆಟವಾಡುತ್ತಿದ್ದಾಗ ಚರಂಡಿಗೆ ಬಿದ್ದು ಬಾಲಕ ಸಾವು

**ಬೀದರ್,ಫೆ.14–**ಮನೆ ಮುಂದೆ ಆಟವಾಡುತ್ತಿದ್ದ 5 ವರ್ಷದ ಬಾಲಕ ಚರಂಡಿಗೆ ಬಿದ್ದು ದಾರುಣವಾಗಿ ಮೃತಪಟ್ಟಿರುವ ಘಟನೆನಡೆದಿದೆ.
ಬೀದರ್ ತಾಲೂಕಿನ ಮರ್ಜಾಪುರ (ಎಂ) ಗ್ರಾಮದಲ್ಲಿ ದುರ್ಘಟನೆ ನಡೆದಿದ್ದು, ಅವಿನಾಶ್ (5) ಮೃತ ಬಾಲಕ ಎಂದು ತಿಳಿದು ಬಂದಿದೆ.
ಹಬ್ಬದ ನಿಮಿತ್ತ ಅಜ್ಜಿ–ತಾತನ ಮನೆಗೆ ಬಾಲಕ ಆಟ ಆಡುವ ವೇಳೆ ಆಯತಪ್ಪಿ ಚರಂಡಿ ನೀರು ತುಂಬಿದ್ದ ಗುಂಡಿಗೆ ಬಿದ್ದಿದ್ದಾನೆ. ಬಾಲಕ ಮನೆಗೆ ಬಾರದೇ ಇದ್ದಾಗ ಗಾಬರಿಗೊಂಡ ಪೊಷಕರು ಹುಡುಕಾಡಿದ್ದಾರೆ.



ಬಳಿಕ ಚರಂಡಿ ನೀರಿನಲ್ಲಿ ಬಾಲಕನ ಮೃತದೇಹ ಪತ್ತೆಯಾಗಿದೆ. ಬಗದಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಮತೋಲಿತ ಆಹಾರ



"ಸಮತೋಲನ ವರ್ಧಕ ಎಂದರೆ ಅಗತ್ಯವಿರುವ ಎಲ್ಲಾ ಪೋಷಕಾಂಶಗಳನ್ನು ಒಳಗೊಂಡಿರುವ ಆಹಾರಕ್ರಮ.

ಸಮತೋಲಿತ ಆಹಾರವನ್ನು ರೂಪಿಸುವ ಐದು ಗುಂಪುಗಳ ಆಹಾರವನ್ನು ಹೀಗೆ ವಿವರಿಸಬಹುದು.

ಸಮತೋಲನ ಆಹಾರ ಎಂದರೆ ವಯಸ್ಸು, ಲಿಂಗ, ದೇಹ ಪ್ರಕೃತಿ, ಕೆಲಸದ ಪ್ರಕಾರ ಮತ್ತು ಹವಾಮಾನ ಪರಿಸ್ಥಿತಿಗಳಿಗೆ ಅನುಗುಣವಾಗಿ ಅಗತ್ಯವಿರುವ ಪ್ರಮಾಣದಲ್ಲಿ ಪ್ರೋಟೀನ್‌ಗಳು, ಕೊಬ್ಬುಗಳು, ಪಿಷ್ಟ, ಖನಿಜಗಳು, ಜೀವಸತ್ವಗಳು ಸೇರಿದಂತೆ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಆಹಾರ.

ಸಾಮಾನ್ಯವಾಗಿ ಶಾಲೆಗಳಲ್ಲಿ ಓದುತ್ತಿರುವ ನಮ್ಮ ಮಕ್ಕಳು ರೊಟ್ಟಿ, ಚಪಾತಿ ಪಲ್ಯಗಳನ್ನು ಹೊರತುಪಡಿಸಿ ಬೇರೇನನ್ನೂ ಸೇವಿಸುವುದಿಲ್ಲ. ಆ ರೀತಿಯಲ್ಲಿ ಅವರಿಗೆ ಸಾಕಷ್ಟು ಖನಿಜಗಳು ಮತ್ತು ಜೀವಸತ್ವಗಳು ಸಿಗುವುದಿಲ್ಲ. ಅವರ ಆಹಾರದಲ್ಲಿ ಹಾಲು, ಹಣ್ಣುಗಳು, ಸಾಕಷ್ಟು ಪ್ರಮಾಣದ ತರಕಾರಿಗಳು ಮತ್ತು ಲವಣಗಳು ಇರಲೇಬೇಕು. ಮಾಂಸಾಹಾರಿ ಕುಟುಂಬಗಳ ಮಕ್ಕಳಿಗೆ ಮೊಟ್ಟೆ, ಮಾಂಸ ಮತ್ತು ಮೀನುಗಳನ್ನು ಒದಗಿಸಬಹುದು. ಮಕ್ಕಳು ಮನೆಯಲ್ಲಿ ಪಡೆಯುವುದಕ್ಕೆ ಪೂರಕವಾಗಿ ಮಧ್ಯಾಹ್ನದ ಊಟವನ್ನು ಒದಗಿಸುವ ವ್ಯವಸ್ಥೆ ಇರಲೇಬೇಕು. ಮಾಧ್ಯಮಿಕ ಶಿಕ್ಷಣ ಆಯೋಗವು ಸ್ಥಳೀಯ ಸಂಸ್ಥೆ, ಗಓಋಅಇಈ ಅಥವಾ ಅಂಖಇ ಸಂಸ್ಥೆಯು ಸಹಾಯದಿಂದ ಪ್ರಾಥಮಿಕ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುವಂತೆ ಶಿಫಾರಸು ಮಾಡಿದ್ದು ಈ ಅಂಖಇ ಯೋಜನೆ ಈಗಾಗಲೇ ದೇಶಾದ್ಯಂತ ಚಾಲ್ತಿಯಲ್ಲಿದೆ, ಆದರೆ ಈ ಮೂಲಗಳು ವಿರಳವಾಗಿವೆ. ಸ್ಥಳೀಯ ಸಾರ್ವಜನಿಕರು ಮಧ್ಯಾಹ್ನದ ಊಟಕ್ಕೆ ದೇಣಿಗೆ ನೀಡಲೇ ಬೇಕು.

ಸಮತೋಲಿತ ಆಹಾರವು ಐದು ಆಹಾರ ಗುಂಪುಗಳಿಂದ ಪಡೆದ ವಿವಿಧ ಆಹಾರ ಪದಾರ್ಥಗಳನ್ನು ಆಧರಿಸಿದೆ ಎಂದು ತೋರಿಸುತ್ತದೆ. ಕೆಲವೊಮ್ಮೆ ಈ ಆಹಾರಗಳನ್ನು ಏಳು ಅಥವಾ ಹನ್ನೊಂದು ಗುಂಪುಗಳಾಗಿ ಉಪ-ವಿಭಾಗ ಮಾಡಲಾಗುತ್ತದೆ.

**ಐದು ಆಹಾರ ಗುಂಪುಗಳಿದ್ದು ಅವು ಹೀಗಿವೆ-** ಮೊದಲ ಗುಂಪಿನ ಧಾನ್ಯಗಳು, ಬೇರುಗಳು ಮತ್ತು ಗೆಡ್ಡೆಗಳು-ಇವೆಲ್ಲವೂ ಪ್ರಾಥಮಿಕವಾಗಿ ಶಕ್ತಿ ಅಥವಾ ಕ್ಯಾಲೊರಿಗಳನ್ನು ಪೂರೈಸುತ್ತವೆ. ಈ ಆಹಾರ ಗುಂಪು ಥಯಾಮಿನ್, ನಿಯಾಸಿನ್ ಮತ್ತು ಕಬ್ಬಿಣದ ಪ್ರಮುಖ ಮೂಲವಾಗಿದೆ. ಇವುಗಳಲ್ಲಿ ಅಕ್ಕಿ, ಗೋಧಿ, ಜೋಳ, ಬಾಜ್ರಾ, ರಾಗಿ ಮತ್ತು ಇತರ ಧಾನ್ಯಗಳು, ಟಪಿಯೋಕಾ, ಆಲೂಗಡ್ಡೆ, ಸಿಹಿ-ಆಲೂಗಡ್ಡೆ, ಅರ್ವಿ (ಕೊಲೊಕಾಸಿಯಾ), ಗೆಣಸು-ಬೇರುಗಳು ಮತ್ತು ಗೆಡ್ಡೆಗಳು ಸೇರಿವೆ.

ಹಿಟ್ಟು ಮತ್ತು ಧಾನ್ಯಗಳು ಕ್ಯಾಲೋರಿಗಳು, ಪ್ರೋಟೀನ್ಗಳು, ಕಬ್ಬಿಣ ಮತ್ತು ವಿಟಮಿನ್‌ಗಳಿಗೆ ಗಮನಾರ್ಹ ಕೊಡುಗೆ ನೀಡುತ್ತವೆ. ಇವು ಅಗ್ಗವಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುತ್ತಾರೆ. ಕಡಿಮೆ ಆದಾಯದ ಗುಂಪಿನ ಆಹಾರಕ್ರಮದಲ್ಲಿ ಇವು ಮುಖ್ಯವಾಗಿವೆ.

ಗುಂಪು 2 ರಲ್ಲಿ ಪ್ರೋಟೀನ್ ನೀಡುವ ಆಹಾರಗಳ ಪಟ್ಟಿ ಮಾಡಿದ್ದು ಈ ಗುಂಪಿನಲ್ಲಿ ಪ್ರಾಥಮಿಕವಾಗಿ ಪ್ರೋಟೀನ್ ಮೂಲಗಳು ಸೇರಿವೆಯಾದರೂ ಕೆಲ ಧಾನ್ಯಗಳು ಸಹ ಪ್ರೋಟೀನನ್ನು ಒದಗಿಸುತ್ತವೆ. ಬೇಳೆ, ಧಾನ್ಯಗಳು, ಬಟಾಣಿ, ಬೀನ್ಸ್, ನೆಲಗಡಲೆ, ಗೋಡಂಬಿ, ಬಾದಾಮಿ, ತೆಂಗಿನಕಾಯಿ, ಹಾಲು, ಮೊಸರು, ಬೆಣ್ಣೆ-ಹಾಲು, ಪನೀರ್, ಖೋವಾ, ಮೊಟ್ಟೆ, ಮೀನು, ಕುರಿಮರಿ, ಕೋಳಿ, ಹಂದಿಮಾಂಸ ಮತ್ತು ಇತರ ಮಾಂಸದ ಆಹಾರಗಳು ಈ ಗುಂಪನ್ನು ರೂಪಿಸುತ್ತವೆ. ಇದು ತರಕಾರಿ ಮತ್ತು ಪ್ರಾಣಿ ಸಾಮ್ರಾಜ್ಯದಿಂದ ಪ್ರೋಟೀನ್ ಅನ್ನು ಒದಗಿಸುತ್ತದೆ.

ಹಾಲು ಮತ್ತು ಡೈರಿ ಉತ್ಪನ್ನಗಳು ಕ್ಯಾಲ್ಸಿಯಂ ಮತ್ತು ರೈಬೋಫ್ಲಾವಿನ್‌ನ ಪ್ರಮುಖ ಮೂಲಗಳಾಗಿವೆ. ಪ್ರೋಟೀನ್ ಕೊಡುಗೆಯಲ್ಲಿ ಅವು ಮಾಂಸ ಗುಂಪಿನ ನಂತರ ಎರಡನೇ ಸ್ಥಾನದಲ್ಲಿವೆ. ಮಾಂಸ, ಮೀನು ಮತ್ತು ಮೊಟ್ಟೆಗಳು ಅವುಗಳ ಪ್ರೋಟೀನ್, ಕಬ್ಬಿಣ ಮತ್ತು ನಿಯಾಸಿನ್ ಅಂಶದಲ್ಲಿ ಮೊದಲ ಸ್ಥಾನದಲ್ಲಿವೆ.

**ಮೂರನೇ ಗುಂಪಿನಲ್ಲಿ ಕೊಬ್ಬುಗಳು/ಎಣ್ಣೆಗಳು ಸಕ್ಕರೆ/ಬೆಲ್ಲ**-ಈ ಗುಂಪಿನಲ್ಲಿ ಶಕ್ತಿ ಅಥವಾ ಆಹಾರ ಪದಾರ್ಥಗಳನ್ನು ಪೂರೈಸುವ ಆಹಾರ ಪದಾರ್ಥಗಳು ಸೇರಿವೆ, ಉದಾಹರಣೆಗೆ ಸಸ್ಯಜನ್ಯ ಎಣ್ಣೆಗಳು, ವನಸ್ಪತಿ ತುಪ್ಪ, ಬೆಣ್ಣೆ, ಕೆನೆ, ಸಕ್ಕರೆ, ಬೆಲ್ಲ. ಇದು ಆಹಾರದ ಶಕ್ತಿಯ ಮೌಲ್ಯದ ಸುಮಾರು 16 ನೇ ಭಾಗವನ್ನು ಹೊಂದಿದೆ, ಆದರೆ ಪ್ರೋಟೀನ್, ಖನಿಜ ಅಥವಾ ವಿಟಮಿನ್ ಮಟ್ಟಗಳಿಗೆ ಗಮನಾರ್ಹವಾಗಿ ಸೇರಿಸುವುದಿಲ್ಲ. "ಎಣ್ಣೆಗಳನ್ನು ಆಹಾರದಲ್ಲಿ ಮಿತವಾಗಿ ಬಳಸಬೇಕಾದರೂ ಅವು ಆಹಾರಕ್ಕೆ ರುಚಿ ಮತ್ತು ಸುವಾಸನೆಯನ್ನು ಸೇರಿಸುತ್ತವೆ. ಭಾರತದಲ್ಲಿ, ಲಭ್ಯವಿರುವ ಅಡುಗೆ ಎಣ್ಣೆಗಳಲ್ಲಿ ಸಾಸಿವೆ ಎಣ್ಣೆ, ತೆಂಗಿನ ಎಣ್ಣೆ, ಎಳ್ಳೆಣ್ಣೆ, ನೆಲಗಡಲೆ ಎಣ್ಣೆ, ತಾಳೆ ಎಣ್ಣೆ ಮತ್ತು ಹೂವಿನ ಎಣ್ಣೆ ಸೇರಿವೆ.

**ಸಮತೋಲಿತ ಆಹಾರಕ್ಕಾಗಿ ಆಹಾರ ಗುಂಪುಗಳು**

ನಾಲ್ಕನೇ ಗುಂಪಿನಲ್ಲಿ. ಖನಿಜಗಳು ಮತ್ತು ಜೀವಸತ್ವಗಳ ರಕ್ಷಣಾತ್ಮಕ ತರಕಾರಿಗಳು, ಉದಾ. ಪಾಲಕ್ (ಪಾಲಕ್), ಮೆಂತ್ಯ (ಮೆಂತ್ಯ ಎಲೆಗಳು), ಅರ್ವಿ (ಕೊಲೊಕಾಸಿಯಾ) ಹಾಗೂ ಅಂತಹುದೇ ಸೊಪ್ಪುಗಳನ್ನು ಬಳಸಬೇಕು.

ವರ್ಗ ಬಿ-ಹಳದಿ ಅಥವಾ ಕಿತ್ತಳೆ ಹಣ್ಣುಗಳು ಮತ್ತು ತರಕಾರಿಗಳು-ಪಪ್ಪಾಯಿ, ಮಾವು, ಕ್ಯಾರೆಟ್, ಹಳದಿ ಕುಂಬಳಕಾಯಿ. ವರ್ಗ ಸಿ-ವಿಟಮಿನ್ ಸಿ ಸಮೃದ್ಧವಾಗಿರುವ ಹಣ್ಣುಗಳು ಮತ್ತು ತರಕಾರಿಗಳು-ನೆಲ್ಲಿಕಾಯಿ, ಪೇರಲ, ನಿಂಬೆ, ಕಿತ್ತಳೆ, ಫಾಲ್ಸಾ.

ಐದನೇ ಗುಂಪಿನಲ್ಲಿ ಇತರ ತರಕಾರಿಗಳು ಇದ್ದು ಇವು ರುಚಿ ಮತ್ತು ವಿನ್ಯಾಸದಲ್ಲಿ ವೈವಿಧ್ಯತೆಯನ್ನು ಒದಗಿಸುತ್ತವೆ ಮತ್ತು ಆಹಾರವನ್ನು ಒದಗಿಸುತ್ತವೆ, ಉದಾ., ಹಣ್ಣುಗಳು, ಕಾಂಡಗಳು, ಎಲೆಗಳು ಮತ್ತು ಸಸ್ಯಗಳ ಹೂವುಗಳು, ಬೆಂಡೆಕಾಯಿಗಳು, ಬದನೆಕಾಯಿಗಳು, ಹಾಗಲಕಾಯಿಗಳು ಮತ್ತು ಅವಳ ಸೋರೆಕಾಯಿಗಳು, ಎಲೆಕೋಸು, ಹೂಕೋಸು, ನುಗ್ಗೆಕಾಯಿಗಳು,

ಪ್ರತಿಯೊಂದು ಗುಂಪುಗಳಿಂದ ತೆಗೆದುಕೊಳ್ಳಲಾದ ಆಹಾರ ಪದಾರ್ಥಗಳನ್ನು ಒಳಗೊಂಡಿರುವ ಆಹಾರವು ಎಲ್ಲಾ ಭಾವನಾತ್ಮಕ ಪೋಷಕಾಂಶಗಳನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸುತ್ತದೆ ಮತ್ತು ಅವುಗಳನ್ನು ಸೇವಿಸುವ ಹೆಚ್ಚಿನ ವ್ಯಕ್ತಿಗಳನ್ನು ಆರೋಗ್ಯದ ಮನಸ್ಥಿತಿಯಲ್ಲಿರಿಸುತ್ತದೆ. ಈ ಸ್ಥಿತಿಯಲ್ಲಿ ಮೇಲಿನ ಆಹಾರಗಳಲ್ಲಿ ಸೇವಿಸಲಾದ ಪ್ರತಿಯೊಂದು ವರ್ಗದ ಆಹಾರ ಪದಾರ್ಥಗಳು ವಿವಿಧ ಪೋಷಕಾಂಶಗಳ ದೈನಂದಿನ ಅಗತ್ಯವನ್ನು ಹೇಗೆ ಪೂರೈಸುತ್ತವೆ ಎಂಬುದನ್ನು ವಿವರವಾಗಿ ಪರಿಗಣಿಸುವುದು ಉಪಯುಕ್ತವಾಗಬಹುದು.ಟ

ಸಮತೋಲಿತ ಆಹಾರದ ಪ್ರಾಮುಖ್ಯ

ಸಮತೋಲಿತ ಆಹಾರವನ್ನು ಅನುಸರಿಸುವುದು ಎಂದರೆ ಉತ್ತಮ ಆರೋಗ್ಯಕ್ಕಾಗಿ ಮೂಲಭೂತ ಆಹಾರ ಅವಶ್ಯಕತೆಗಳನ್ನು ಭದ್ರಪಡಿಸಿಕೊಳ್ಳುವುದು.

ಸಮತೋಲಿತ ಆಹಾರವು ದೇಹಕ್ಕೆ ಶಕ್ತಿಯನ್ನು ಪೂರೈಸುತ್ತದೆ, ದುರಸ್ತಿ ಮತ್ತು ಬೆಳವಣಿಗೆಯ ವಸ್ತುಗಳನ್ನು ಒದಗಿಸುತ್ತದೆ ಮತ್ತು ಅದನ್ನು ನಿಯಂತ್ರಿಸಲು ಜೀವಸತ್ವಗಳನ್ನು ನೀಡುತ್ತದೆ. ಈ ಅವಶ್ಯಕತೆಗಳಲ್ಲಿ ಕೆಲವು ಜೀವನದ ಕೆಲವು ಹಂತಗಳಲ್ಲಿ ಹೆಚ್ಚು ಅಗತ್ಯವಾಗಿರುತ್ತದೆ. ಬಾಲ್ಯ ಮತ್ತು ಹದಿಹರೆಯದಲ್ಲಿ. ಪ್ರೋಟೀನ್‌ನಂತಹ ಹೆಚ್ಚಿನ ಬೆಳವಣಿಗೆಯ ವಸ್ತುಗಳು ಬೇಕಾಗುತ್ತವೆ. ವೃದ್ಧಾಪ್ಯದಲ್ಲಿಯೂ ಸಹ ದೇಹದ ಮೂಳೆಯನ್ನು ಬಲಗೊಳಿಸಲು ಹೆಚ್ಚಿನ ಪ್ರೋಟೀನ್ ಅಗತ್ಯವಿದೆ, ಕ್ಯಾಲ್ಸಿಯಂ, ರಂಜಕ ಮತ್ತು ಇತರ ಖನಿಜಗಳು ಬೇಕಾಗುತ್ತವೆ. ಅಂಗಾಂಶಗಳನ್ನು ರೂಪಿಸಲು ಜೀವಸತ್ವಗಳು ಸಹ ಬೇಕಾಗುತ್ತವೆ. ಜೀವನದುದ್ದಕ್ಕೂ ಒಬ್ಬ ವ್ಯಕ್ತಿಗೆ ಕಾರ್ಬೋಹೈಡ್ರೇಟ್‌ಗಳಿಂದ ಪೂರೈಸಲ್ಪಡುವ ಶಕ್ತಿ ಬೇಕಾಗುತ್ತದೆ.

ಆಹಾರವು ನಮ್ಮ ದೈಹಿಕ ಆರೋಗ್ಯದ ಗುಣಮಟ್ಟವನ್ನು ಹೆಚ್ಚಿಸಿ ತನ್ಮೂಲಕ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಕೂಡ ಹೆಚ್ಚಿಸುತ್ತದೆ.

ಸಮತೋಲಿತ ಆಹಾರವು ಈ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತದೆ. ಇವುಗಳ ಜೊತೆಗೆ ಇದು ಕಬ್ಬಿಣ, ಅಯೋಡಿನ್ ಮತ್ತು ಹೆಚ್ಚುವರಿ ಆಹಾರವನ್ನು ಸಹ ಪೂರೈಸುತ್ತದೆ

ಸಾಮಾನ್ಯ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಉತ್ತಮ ಪೋಷಣೆ ಅತ್ಯಗತ್ಯ ಇದು ರೋಗವನ್ನು ತಡೆಯುತ್ತದೆ"

ಆಹಾರದ ಘಟಕಗಳು ಅಥವಾ ಪದಾರ್ಥಗಳು ಈ ಕೆಳಗಿನಂತಿವೆ

1. ಪ್ರೋಟೀನ್ಗಳು 2. ಕಾರ್ಬೋಹೈಡ್ರೇಟ್ಗಳು 3. ಕೊಬ್ಬುಗಳು 4. ಖನಿಜ ಲವಣಗಳು 5. ವಿಟಮಿನ್ಸ್ 6. ನೀರು.

ಇವುಗಳ ಕುರಿತುಮುಂದಿನ ಕಂತಿನಲ್ಲಿ ನೋಡೋಣ..

**-ವೀಣಾ ಹೇಮಂತ್ ಗೌಡ ಪಾಟೀಲ್, ಮುಂಡರಗಿ**

# ಯಾದಗಿರಿಯಲ್ಲಿ ಕಾರ್ಮಿಕ-ರೈತ ವಿರೋಧಿ ನೀತಿಗಳ ವಿರುದ್ಧ ತೀವ್ರ ಆಕ್ರೋಶ

**ಯಾದಗಿರಿ:ಫೆ.14**: ಕಾರ್ಮಿಕ ಹಾಗೂ ರೈತ ವಿರೋಧಿ ನೀತಿಗಳನ್ನು ಖಂಡಿಸಿ, ಕೇಂದ್ರ ಸರ್ಕಾರ ಜಾರಿಗೊಳಿಸಿರುವ 4 ಕಾರ್ಮಿಕ ಸಂಹಿತೆಗಳನ್ನು (ಲೇಬರ್ ಕೋಡ್‌ಗಳು) ತಕ್ಷಣ ಹಿಂಪಡೆಯಬೇಕೆಂದು ಆಗ್ರಹಿಸಿ, ಎಐಯುಟಿಯುಸಿ, ಸಿಐಟಿಯು ಸೇರಿದಂತೆ ವಿವಿಧ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹಾಗೂ ಸ್ವತಂತ್ರ ವಲಯದ ನೌಕರರ ಮಹಾಸಂಘಗಳ ನೇತೃತ್ವದಲ್ಲಿ ಇಂದು ನಗರದಲ್ಲಿ ಅಖಿಲ ಭಾರತ ಸಾರ್ವತ್ರಿಕ ಮಹಾ ಮುಷ್ಕರದ ಅಂಗವಾಗಿ ಭಾರೀ ಪ್ರತಿಭಟನೆ ನಡೆಯಿತು.

ನಗರದ ಹೊಸ ಬಸ್ ನಿಲ್ದಾಣದಿಂದ ಸುಭಾಷ್ ವೃತ್ತದವರೆಗೆ ಕಾರ್ಮಿಕರು, ರೈತರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮೆರವಣಿಗೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದು, ಪ್ರತಿಭಟನೆಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ಕಾರ್ಪೊರೇಟ್ ಪರ ಆರ್ಥಿಕ ಧೋರಣೆಯನ್ನು ತೀವ್ರವಾಗಿ ಖಂಡಿಸಿ, ಸಾರ್ವಜನಿಕ ವಲಯದ ಪ್ರಮುಖ ಸಂಸ್ಥೆಗಳ ಖಾಸಗೀಕರಣ ನೀತಿಯನ್ನು ವಿರೋಧಿಸಿದರು. ಖಾಸಗೀಕರಣದಿಂದ ಉದ್ಯೋಗಾವಕಾಶಗಳು ಕುಂಠಿತಗೊಂಡು ನಿರುದ್ಯೋಗ ಪ್ರಮಾಣ ಏರಿಕೆಯಾಗಿದೆ ಎಂದು ಆರೋಪಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳ ವ್ಯಾಪಾರೀಕರಣ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ದುರ್ಬಲಗೊಳಿಸುವ ಕ್ರಮಗಳನ್ನು ಖಂಡಿಸಲಾಯಿತು. ವಿದ್ಯುತ್ ತಿದ್ದುಪಡಿ ಮಸೂದೆ ಸೇರಿದಂತೆ ಹಲವು ನೀತಿಗಳು ಜನವಿರೋಧಿ ಕ್ರಮಗಳಾಗಿವೆ ಎಂದು ಟೀಕಿಸಲಾಯಿತು.

ಕಾರ್ಮಿಕ ಸಂಹಿತೆಗಳ ಜಾರಿಯಿಂದ ಮುಷ್ಕರ ಹಕ್ಕು ಕಡಿತ, ನಿಗದಿತ ಅವಧಿ ಉದ್ಯೋಗ ವ್ಯವಸ್ಥೆ ವಿಸ್ತರಣೆ, ಕೆಲಸದ ಅವಧಿ ಹೆಚ್ಚಳ ಕಾರ್ಮಿಕರ ಹಕ್ಕುಗಳಿಗೆ ಧಕ್ಕೆ ತಂದಿದೆ ಎಂದು ಸಂಘಟನೆಗಳು ಆರೋಪಿಸಿವೆ.

ಮೆರವಣಿಗೆ ಹಿನ್ನೆಲೆಯಲ್ಲಿ ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಏರ್ಪಡಿಸಿತ್ತು. ಪ್ರಮುಖ ರಸ್ತೆಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಪ್ರತಿಭಟನಾ ಮೆರವಣಿಗೆಯಿಂದ ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿ, ಸಾರ್ವಜನಿಕರು ಪರ್ಯಾಯ ಮಾರ್ಗಗಳನ್ನು ಬಳಸುವಂತಾಯಿತು.

4 ಲೇಬರ್ ಕೋಡ್‌ಗಳನ್ನು ತಕ್ಷಣ ಹಿಂಪಡೆಯಬೇಕು
ವಿದ್ಯುತ್ ತಿದ್ದುಪಡಿ, ಭೂಸ್ವಾಧೀನ, ಬೀಜ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕು
ಲೇಬರ್ ಕೋಡ್ ನಿಯಮಾವಳಿ ಜಾರಿ ನಿಲ್ಲಿಸಬೇಕು
ಕನಿಷ್ಠ ವೇತನ ಪರಿಷ್ಕರಣೆ ಜಾರಿಗೊಳಿಸಬೇಕು



ಮೆರವಣಿಗೆ ಬಳಿಕ ನಗರದ ಸುಭಾಷ್ ವೃತ್ತದಲ್ಲಿ ನಡೆದ ಪ್ರತಿಭಟನಾ ಸಭೆ ತೀವ್ರ ಆಕ್ರೋಶದ ವೇದಿಕೆಯಾಗಿತು. ವಿವಿಧ ಕಾರ್ಮಿಕ, ರೈತ ಹಾಗೂ ಶ್ರಮಜೀವಿ ಸಂಘಟನೆಗಳ ಮುಖಂಡರು ಸರ್ಕಾರದ ಕಾರ್ಮಿಕ, ಕೃಷಿ ಹಾಗೂ ಸಾರ್ವಜನಿಕ ವಲಯ ನೀತಿಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಸಭೆಯಲ್ಲಿ ಮಾತನಾಡಿದ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ. ಸೋಮಶೇಖರ್ ಅವರು, ನಾಲ್ಕು ಲೇಬರ್ ಕೋಡ್‌ಗಳನ್ನು ಕಾರ್ಮಿಕ ಹಿತಾಸಕ್ತಿಗಳ ಸುಧಾರಣೆ ಎಂಬ ಹೆಸರಿನಲ್ಲಿ ಜಾರಿಗೊಳಿಸಲಾಗುತ್ತಿದ್ದರೂ ವಾಸ್ತವದಲ್ಲಿ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಹಿಂಸುವಂತಿವೆ ಎಂದು ಆರೋಪಿಸಿದರು. ಮುಷ್ಕರ ಹಕ್ಕಿನ ಮೇಲಿನ ನಿಬರ್ಂಧ, ಸಾಮೂಹಿಕ ಚರ್ಚಾ ವ್ಯವಸ್ಥೆಯ ಕುಂಠಿತಗೊಳಿಕೆ, ನಿಗದಿತ ಅವಧಿ ಉದ್ಯೋಗ ವ್ಯವಸ್ಥೆ (ಫಿಕ್ಸ್ಡ್ ಟರ್ಮ್ ಎಂಪ್ಲಾಯ್ಮೆಂಟ್), ದಿನಕ್ಕೆ 12 ಗಂಟೆಗಳವರೆಗೆ ಕೆಲಸದ ಅವಕಾಶ, ಮಹಿಳೆಯರಿಗೆ ರಾತ್ರಿ ಪಾಳಿ ಜಾರಿಗೊಳಿಸುವ ಪ್ರಸ್ತಾವನೆ-ಇವೆಲ್ಲವೂ ಕಾರ್ಮಿಕರ ಶ್ರಮ ಭದ್ರತೆಯನ್ನು ದುರ್ಬಲಗೊಳಿಸುವ ಕ್ರಮಗಳಾಗಿವೆ ಎಂದು ಅವರು ಆಕ್ಷೇಪಿಸಿದರು.

29 ಪ್ರತ್ಯೇಕ ಕಾರ್ಮಿಕ ಕಾಯ್ದೆಗಳನ್ನು ಒಗ್ಗೂಡಿಸಿ ಬಂಡವಾಳಶಾಹಿ ಪರವಾದ ಏಕೀಕೃತ ಸಂಹಿತೆ ರೂಪಿಸುವ ಮೂಲಕ ಕಾರ್ಮಿಕರ ಹಕ್ಕುಗಳನ್ನು ಕಾನೂನುಬದ್ಧವಾಗಿ ಕುಂಠಿತಗೊಳಿಸಲಾಗುತ್ತಿದೆ ಎಂದು ಅವರು ದೂರಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ವೇಗದ ಖಾಸಗೀಕರಣ, ಆರ್ಥಿಕ ಅಸಮಾನತೆ ವಿಸ್ತರಣೆ ದುಡಿಯುವ ವರ್ಗವನ್ನು ಸಂಕಷ್ಟದ ಅಂಚಿಗೆ ತಳ್ಳಿದೆ ಎಂದರು. ವಿಮಾ ವಲಯವನ್ನು ಶೇ.100 ವಿದೇಶಿ ಹೂಡಿಕೆಗೆ ತೆರೆಯುವುದು ಹಾಗೂ ಅಣುಶಕ್ತಿ ವಿಸ್ತರಣೆ ಯೋಜನೆಗಳು ಸಾರ್ವಜನಿಕ ಸುರಕ್ಷತೆ ಮತ್ತು ಸ್ವಾವಲಂಬನೆಗೆ ಧಕ್ಕೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.
ಸಭೆ ಅಂತ್ಯದಲ್ಲಿ ಕಾರ್ಮಿಕ-ರೈತ ಐಕ್ಯ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ನಿರ್ಣಯ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ. ಸೋಮಶೇಖರ್, ಜಿಲ್ಲಾ ಸಂಚಾಲಕ ಜೈಲಾಲ್ ತೋಟದಮನಿ, ಜಿಲ್ಲಾ ಅಧ್ಯಕ್ಷೆ ಡಿ. ಉಮಾದೇವಿ, ಬಸವರಾಜ ದೊರೆ, ಶರಣಪ್ಪ ತೆಳಗೇರ, ಅನಿತಾ ಹಿರೇಮಲ್, ಪುಷ್ಪಲತಾ, ನಾಗರತ್ನ ಪಾಟೀಲ್, ಶರಣಗೌಡ ಗೂಗಲ್, ಎಸ್.ಎಂ. ಸಾಗರ, ಮಲ್ಲಿಕಾರ್ಜುನ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಶ್ರೀ ದತ್ತನ ಕ್ಷೇತ್ರ ಸಮಗ್ರ ಅಭಿವೃದ್ಧಿ ಪಡಿಸಲು ನಮ್ಮ ಸರ್ಕಾರ ಬದ್ಧ ; ರಾಮಲಿಂಗಾ ರೆಡ್ಡಿ

**ಅಫಜಲಪುರ ; ಫೆ.14:**ಶ್ರೀ ದತ್ತಾತ್ರೇಯನ ಸುಕ್ಷೇತ್ರವಾದ ದೇವಲ ಗಾಣಗಾಪುರ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದ್ದು, ತಮ್ಮ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವುದಾಗಿ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ತಾಲೂಕಿನ ದೇವಲ ಗಾಣಗಾಪುರದ ಶ್ರೀ ದೇವಸ್ಥಾನ ಅಡಿಯಲ್ಲಿ ಬರುವ ಶ್ರೀ ತಂತುಕೇಶ್ವರ ದೇವಸ್ಥಾನದ ಅನ್ನದಾಸೋಹ ಭವನಕ್ಕೆ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು, ದೇವಸ್ಥಾನದ ಭಕ್ತರುಗಳಾದ ವಿಜಯವಾಡ ಮೂಲದ ಶ್ರೀನಿವಾಸ ಮತ್ತು ಸುಕುಮಾರಿ ಕೊನೇರು ದಂಪತಿಗಳು ಅಂದಾಜು 2 ಕೋಟಿ ರೂ.ವೆಚ್ಚದಲ್ಲಿ ಅನ್ನದಾಸೋಹ ಭವನಕ್ಕೆ ನಿರ್ಮಿಸಲು ಮುಂದೆ ಬಂದಿರುವುದು ಸಂತೋಷದ ವಿಷಯ.ಹಣ ಎಲ್ಲರ ಬಳಿ ಇದೆ ಆದರೆ ದಾನ ಮಾಡುವ ಮನಸ್ಸು ಬೇಕಲ್ಲವೆ.ಇದಕ್ಕಾಗಿ ದಂಪತಿಗೆ ವಿಶೇಷ ಅಭಿನಂದನೆ ಸಲ್ಲಿಸುವೆ ಎಂದರು.

ಗಾಣಗಾಪುರ ದೇವಸ್ಥಾನ ಕ್ಷೇತ್ರದ ಅಭಿವೃದ್ಧಿಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸಾದ ಯೋಜನೆಯಡಿ 83.52 ಕೋಟಿ ರೂ.ಮೊತ್ತದ ಕ್ರಿಯಾ ಯೋಜನೆಯ ಪ್ರಸ್ತಾವನೆ ಸಲ್ಲಿಸಲಾಗಿತ್ತಾದರು,ಕೇಂದ್ರ ಸರ್ಕಾರ ಅದನ್ನು ಪರಿಗಣಿಸಿಲ್ಲ.ಹೀಗಾಗಿ ಇಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲೆಯ ಶಾಸಕರೊಂದಿಗೆ ಚರ್ಚಿಸಿ ಲಕ್ಷಾಂತರ ಭಕ್ತರನ್ನು ಹೊಂದಿರುವ ಈ ದೇವಸ್ಥಾನದ ಅಭಿವೃದ್ಧಿಗೆ ತಾವು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ಅವರು ಭರವಸೆ ನೀಡಿದರು.

ರಸ್ತೆ, ಶೌಚಾಲಯ, ಕುಡಿಯುವ ನೀರು, ದಾಸೋಹ ಮನೆ, ಪಾರ್ಕಿಂಗ್, ಸ್ನಾನ್ ಘಾಟ್ ಹೀಗೆ ಒಟ್ಟು ಮೂರು ಹಂತದಲ್ಲಿ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಈಗಾಗಲೆ ನೀಲಿ ನಕ್ಷೆ ಸಿದ್ದಪಡಿಸಲಾಗಿದೆ. ಇತ್ತೀಚೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಜತೆ ಒಂದು ಸುತ್ತಿನ ಸಭೆ ಸಹ ನಡೆದಿದೆ. ಜಿಲ್ಲೆಯ ಸಚಿವರು ಮತ್ತು ಶಾಸಕರೊಂದಿಗೆ ಮತ್ತೊಮ್ಮೆ ಸಭೆ ಸೇರಿ ಮುಖ್ಯಮಂತ್ರಿಗಳ ಬಳಿ ಹೋಗಿ ಇದಕ್ಕಾಗಿ ಹೆಚ್ಚಿನ ಅನುದಾನ ನೀಡಲು ಕೋರಲಾಗುವುದು ಎಂದರು.

ಶಾಸಕ ಎಂ.ವೈ.ಪಾಟೀಲ್ ಮಾತನಾಡಿ, ದೇವಸ್ಥಾನಕ್ಕೆ ವರ್ಷಕ್ಕೆ ಒಂದು ಕೋಟಿಗೂ ಹೆಚ್ಚು ಭಕ್ತರು ದರ್ಶನಕ್ಕೆ ಬರುತ್ತಾರೆ. ಮೂಲಸೌಕರ್ಯ ಇಲ್ಲದಿರುವುದಕ್ಕೆ ಭಕ್ತರು ಶಾಪ ಹಾಕುತ್ತಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಕೇಂದ್ರ ಸಚಿವ ನಿತಿನ್ ಗಡ್ಕರಿ, ಮಹಾರಾಷ್ಟ್ರ ಮುಖ್ಯಮಂತ್ರಿ ದೇವಿಂದ್ರ ಫಡ್ನವೀಸ್, ಎಚ್.ಡಿ.ದೇವೆಗೌಡ, ಕುಮಾರಸ್ವಾಮಿ ಸೇರಿದಂತೆ ಅನೇಕ ಗಣ್ಯರು ದೇವಸ್ಥಾನಕ್ಕೆ ಬಂದು ಹೋಗಿದ್ದಾರೆ. ಆದರೆ, ದೇವಸ್ಥಾನ ಅಭಿವೃದ್ಧಿ ಕಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇನ್ನಾದರೂ ಸರ್ಕಾರ ವಿಶೇಷ ಕಾಳಜಿ ವಹಿಸಿ ಪ್ರಸಾದ್ ಯೋಜನೆ ಅಡಿಯಲ್ಲಿ ಹೆಚ್ಚಿನ ಅನುದಾನ ಒದಗಿಸಿ ದೇವಸ್ಥಾನ ಅಭಿವೃದ್ಧಿ ಮಾಡಬೇಕು ಎಂದು ಸಚಿವರಲ್ಲಿ ಮನವಿ ಮಾಡಿಕೊಂಡರು.

ನಂತರ ಅತಿಥಿಗೃಹದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವ ರಾಮಲಿಂಗಾರೆಡ್ಡಿ ಅವರು 102 ಕೋಟಿ ರೂ.ಮೊತ್ತದಲ್ಲಿ ಗಾಣಗಾಪುರ ಮತ್ತು 40 ಕೋಟಿ ರೂ. ಮೊತ್ತದಲ್ಲಿ ಘತ್ತರಗಾ ದೇವಸ್ಥಾನ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೂಲಂಕುಷವಾಗಿ ಚರ್ಚಿಸಿದರು.ಕಾಶಿ ಮಾದರಿಯಲ್ಲಿ ಗಾಣಗಾಪುರ ಅಭಿವೃದ್ಧಿಗೆ ಜಮೀನು ಭೂಸ್ವಾಧೀನ ಅಗತ್ಯವಿದೆ ಮತ್ತು ಘತ್ತರಗಾ ಅಭಿವೃದ್ಧಿಗೆ



ಅನುದಾನ ಲಭ್ಯವಿದ್ದು,ಸರ್ಕಾರ ಮಂಜೂರಾತಿ ನೀಡಬೇಕಿದೆ ಎಂಡು ಡಿ.ಸಿ. ಬಿ.ಫೌಜಿಯಾ ತರನ್ನುಮ್ ನೀಲಿ ನಕ್ಷೆಯೊಂದಿಗೆ ಸಚಿವರ ಗಮನಕ್ಕೆ ತಂದಾಗ ಮುಂಬರುವ ಅಧಿವೇಶನ ಸಂದರ್ಭದಲ್ಲಿ ಈ ಬಗ್ಗೆ ಬೆಂಗಳೂರಿನಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಭೂಸ್ವಾಧೀನ ಕುರಿತು ನಿರ್ಧಾರ ತೆಗದುಕೊಳ್ಳೋಣ ಎಂದರು.

ಈ ಸಂದರ್ಭದಲ್ಲಿ ಕೆಕೆಆರ್ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ಕೆ.ಕೆ.ಆರ್.ಟಿ.ಸಿ ವ್ಯವಸ್ಥಾಪಕ ನಿರ್ದೇಶಕಿ ಡಾ.ಬಿ.ಸುಶೀಲಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ತಹಶೀಲ್ದಾರ್ ಸಂಜೀವಕುಮಾರ ದಾಸರ, ಗಾಣಗಾಪುರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಶಿವಕಾಂತಮ್ಮ, ಪ್ರಕಾಶ್ ಜಮಾದಾರ, ಉದಯಭಟ್ಟ್ ಪೂಜಾರಿ ಸೇರಿದಂತೆ ಅನೇಕ ಅಧಿಕಾರಿಗಳು ಇದ್ದರು.

3 ತಿಂಗಳಲ್ಲಿ ಘತ್ತರಗಾ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ- ಅಫಜಲಪುರ ತಾಲೂಕಿನ ಘತ್ತರಗಾ ಗ್ರಾಮದಲ್ಲಿ ನೆಲೆಸಿರುವ ಶ್ರೀ ಭಾಗ್ಯವಂತಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ಸುಮಾರು 40 ಕೋಟಿ ರೂ.ಮೊತ್ತದ ಪ್ರಸ್ತಾವನೆ ಜಿಲ್ಲಾಡಳಿತದಿಂದ ಬಂದಿದ್ದು, ಕೂಡಲೇ ಅದಕ್ಕೆ ಅನುಮೋದನೆ ನೀಡಿ ಮುಂದಿನ 3-4 ತಿಂಗಳಿನಲ್ಲಿ ಭಕ್ತಾದಿಗಳ ಅನುಕೂಲಕ್ಕಾಗಿ ಮೂಲಸೌಕರ್ಯ ಕೆಲಸಗಳಿಗೆ ಚಾಲನೆ ನೀಡಲಾಗುವುದು ಎಂದರು

ಸಚಿವರು ಬಂದಾಗ ಮಾತ್ರ ಗಿಡ ನೆಡುವ ಅರಣ್ಯ ಇಲಾಖೆ- ದೇವಲ ಗಾಣಗಾಪುರ ದತ್ತಾತ್ರೇಯ ದೇವಸ್ಥಾನಕ್ಕೆ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಗ್ರಾಮದ ಪ್ರವೇಶದ ರಸ್ತೆಯಲ್ಲಿ ಸಾಮಾಜಿಕ ಅರಣ್ಯ ಇಲಾಖೆ ವತಿಯಿಂದ ವಿವಿಧ ಬಗೆಯ ಗಿಡಗಳನ್ನು ಹಚ್ಚುವುದು ಕಂಡು ಗ್ರಾಮದ ಸ್ಥಳೀಯ ಮುಖಂಡರು ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಯವರು ಸಚಿವರು ಬರುತ್ತಾರೆ ಎಂಬ ಕಾರಣಕ್ಕೆ ಗಿಡಗಳನ್ನು ನೆಟ್ಟಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸಚಿವರು ಮತ್ತು ರಾಜ್ಯ ನಾಯಕರು ಬಂದಾಗ ಮಾತ್ರ ಕಣ್ಣು ತೆರೆಯುತ್ತವೆ. ಸಚಿವರುಗಳಿಂದ ಮೆಚ್ಚುಗೆ ಪಡೆಯಲು ತರಾತುರಿಯಲ್ಲಿ ಗಿಡ ನೆಟ್ಟಿದ್ದಾರೆ. ಇನ್ನೂ ಮುಂದೆ ಆದರೂ, ಜನಪ್ರತಿನಿಧಿಗಳಿಗೆ ಮೆಚ್ಚಿದುವುದು ಬಿಟ್ಟು ಅವಶ್ಯಕತೆ ಇರುವ ಸ್ಥಳಗಳಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಗಿಡ ನೆಟ್ಟು ಪರಿಸರ ಹೆಚ್ಚಿಸುವ ಕೆಲಸ ಮಾಡಬೇಕು ಎಂದು ಸ್ಥಳೀಯರು ಅಧಿಕಾರಿಗಳಿಗೆ ಕಿವಿ ಮಾತು ಹೇಳಿದರು.

# ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕನ ಬೇಜವಾಬ್ದಾರಿತನ: ವಸತಿ ವಿದ್ಯಾರ್ಥಿಗಳಿಗೆ ಅವ್ಯವಸ್ಥೆ

**ಯಾದಗಿರಿ :ಫೆ.14:** ಜಿಲ್ಲಾ ಕ್ರೀಡಾ ಇಲಾಖೆಯ ಆಡಳಿತಾತ್ಮಕ ನಿರ್ಲಕ್ಷ್ಯಕ್ಕೆ ವಿದ್ಯಾರ್ಥಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಘಟನೆ ಬೆಳಕಿಗೆ ಬಂದಿದೆ. ಸಹಾಯಕ ನಿರ್ದೇಶಕ ರಾಜು ಬಾವಿಹಳ್ಳಿ ಅವರ ಬೇಜವಾಬ್ದಾರಿ ನಡೆ ಕ್ರೀಡಾ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟುಮಾಡಿದೆ ಎಂಬ ಆರೋಪ ಕೇಳಿಬರುತ್ತಿದೆ.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿನ ಮೂಲಭೂತ ಸೌಕರ್ಯಗಳ ಕೊರತೆ ದಿನದಿಂದ ದಿನಕ್ಕೆ ತೀವ್ರವಾಗುತ್ತಿದ್ದು, ಅದರ ಪರಿಣಾಮ ವಸತಿ ನಿಲಯದ ವಿದ್ಯಾರ್ಥಿಗಳ ಮೇಲೆ ನೇರವಾಗಿ ಬಿದ್ದಿದೆ. ಕುಡಿಯುವ ನೀರು, ಶೌಚಾಲಯ, ಸ್ವಚ್ಛತೆ, ವಸತಿ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳು ಸಮರ್ಪಕವಾಗಿ ಲಭ್ಯವಿಲ್ಲ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.
ಗುರುವಾರ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿ, ಮೂಲಸೌಲಭ್ಯ ಒದಗಿಸುವಂತೆ ಹಾಗೂ ನಿಗದಿತ ಮೆನು ಪ್ರಕಾರ ಪೌಷ್ಟಿಕ ಆಹಾರ ನೀಡುವಂತೆ ಮನವಿ ಪತ್ರ ಸಲ್ಲಿಸಿದರು.

ಈ ನಡುವೆ, ವಸತಿ ನಿಲಯಕ್ಕೆ ಊಟೋಪಹಾರ ಪೂರೈಕೆ ಮಾಡುತ್ತಿರುವ ತಾಲ್ಲೂಕು ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಕ್ಕೆ ಸುಮಾರು ಐದು ತಿಂಗಳಿಂದ ಬಿಲ್ ಮಂಜೂರಾಗಿಲ್ಲ ಎಂಬ ವಿಷಂಯುವೂ ಬಹಿರಂಗವಾಗಿದೆ. ಬಿಲ್ ಅನುಮೋದನೆಗಾಗಿ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಸಂಘದ ಪದಾಧಿಕಾರಿಗಳು ಅಳಲು ತೋಡಿಕೊಂಡಿದ್ದಾರೆ.

ಬಿಲ್ ಬಾಕಿ ಇರುವ ಪರಿಣಾಮ ಆಹಾರದ ಗುಣಮಟ್ಟ ಕುಸಿದಿದ್ದು, ಮೆನು ಪ್ರಕಾರ ಊಟ ಸಿಗುತ್ತಿಲ್ಲ ಎಂಬ ಆರೋಪ ವಿದ್ಯಾರ್ಥಿಗಳಿಂದ ಕೇಳಿಬಂದಿದೆ. ಸುತ್ತಮುತ್ತಲಿನ ಜಿಲ್ಲೆಗಳಿಗೆ ಬಿಲ್ ಮಂಜೂರಾಗಿರುವಾಗ ಯಾದಗಿರಿ ಜಿಲ್ಲೆಯಲ್ಲಿ ಮಾತ್ರ ಬಾಕಿ ಉಳಿದಿರುವುದು ಅನುಮಾನಕ್ಕೆ ಕಾರಣವಾಗಿದೆ.
ನಗರದ ಜಿಲ್ಲಾ ಕ್ರೀಡಾಂಗಣ ಹಾಗೂ ವಸತಿ ನಿಲಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ತಾರಕಕ್ಕೇರಿದೆ. ಕುಡಿಯುವ ನೀರು, ಶೌಚಾಲಯ, ಸ್ವಚ್ಛತೆ, ಹಾಸಿಗೆ, ವಸತಿ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳು ಸಮರ್ಪಕವಾಗಿ ಲಭ್ಯವಿಲ್ಲ ಎಂದು ವಿದ್ಯಾರ್ಥಿಗಳು ದೂರಿದ್ದಾರೆ. ಕ್ರೀಡಾಪಟುಗಳ ಆರೋಗ್ಯ ಮತ್ತು ಅಭ್ಯಾಸಕ್ಕೆ ಅಗತ್ಯವಾದ ವಾತಾವರಣವೇ ಇಲ್ಲದಂತಾಗಿದೆ ಎಂಬುದು ಪಾಲಕರ ಅಳಲು.

ಈ ಹಿನ್ನೆಲೆಯಲ್ಲಿ ಗುರುವಾರ ವಸತಿ ನಿಲಯದ ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು.



ಮೂಲಸೌಲಭ್ಯಗಳನ್ನು ತಕ್ಷಣ ಒದಗಿಸಬೇಕು, ನಿಗದಿತ ಮೆನು ಪ್ರಕಾರ ಪೌಷ್ಟಿಕ ಆಹಾರ ನೀಡಬೇಕು ಎಂದು ಆಗ್ರಹಿಸಿ ಮನವಿ ಪತ್ರ ಸಲ್ಲಿಸಿದರು.ಸಮಸ್ಯೆಯ ಇನ್ನೊಂದು ಗಂಭೀರ ಅಂಶವೂ ಬೆಳಕಿಗೆ ಬಂದಿದೆ. ವಸತಿ ನಿಲಯಕ್ಕೆ ಊಟೋಪಹಾರ ಪೂರೈಕೆ ಮಾಡುತ್ತಿರುವ ತಾಲ್ಲೂಕು ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಕ್ಕೆ ಸುಮಾರು ಐದು ತಿಂಗಳಿಂದ ಸರಬರಾಜು ವೆಚ್ಚದ ಬಿಲ್ ಮಂಜೂರಾಗಿಲ್ಲ ಎನ್ನಲಾಗಿದೆ.

ಬಿಲ್ ಅನುಮೋದನೆಗಾಗಿ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮುಖಾಂತರ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅವರು ದೂರಿದ್ದಾರೆ. ಸಹಾಯಕ ನಿರ್ದೇಶಕರಿಗೆ ನೇರ ಮನವಿ ಸಲ್ಲಿಸಿದರೂ ಸ್ಪಂದನೆ ದೊರಕಿಲ್ಲ ಎಂಬ ಆರೋಪ ಕೇಳಿಬಂದಿದೆ. ಸುತ್ತಮುತ್ತಲಿನ ಜಿಲ್ಲೆಗಳಿಗೆ ಈಗಾಗಲೇ ಬಿಲ್ ಮಂಜೂರಾ ಗಿರುವಾಗ, ಯಾದಗಿರಿ ಜಿಲ್ಲೆಗೆ ಮಾತ್ರ ಸೆಪ್ಟೆಂಬರ್‌ನಿಂದ ಜನವರಿವರೆಗೆ ಬಿಲ್ ಬಾಕಿ ಉಳಿದಿರುವುದು ಅನುಮಾನಕ್ಕೆ ಕಾರಣವಾಗಿದೆ. ಬಿಲ್ ಬಾಕಿ ಇರುವ ಪರಿಣಾಮ ಆಹಾರದ ಗುಣಮಟ್ಟ ಕುಸಿದಿದ್ದು, ಮೆನು ಪ್ರಕಾರ ಊಟ ಸಿಗುತ್ತಿಲ್ಲ. ಪೌಷ್ಟಿಕಾಂಶ ಕೊರತೆಯಿಂದ ವಿದ್ಯಾರ್ಥಿಗಳ ಆರೋಗ್ಯದ ಮೇಲೂ ಪರಿಣಾಮ ಬೀರುವ ಆತಂಕ ವ್ಯಕ್ತವಾಗಿದೆ.

ಸಹಾಯಕ ನಿರ್ದೇಶಕರನ್ನು ವಿಚಾರಿಸಿದಾಗ ಏಜೆನ್ಸಿಗಳ ಮೇಲೆ ಹೊಣೆ ಹಾಕುವ ಮೂಲಕ ಸ್ಪಷ್ಟ ಉತ್ತರ ನೀಡುತ್ತಿಲ್ಲ ಎಂಬ ಆರೋಪವೂ ಕೇಳಿಬಂದಿದೆ. ಅವರ ನಿರ್ಲಕ್ಷ್ಯ ಧೋರಣೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.
ವಸತಿ ನಿಲಯದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ಬಾಕಿ ಬಿಲ್ ಬಿಡುಗಡೆ, ಆಹಾರ ಮತ್ತು ವಸತಿ ಸೌಲಭ್ಯ ಸುಧಾರಣೆ ಹಾಗೂ ಆಡಳಿತಾತ್ಮಕ ಪರಿಶೀಲನೆ ನಡೆಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕ್ರೀಡಾಪಟುಗಳ ಭವಿಷ್ಯಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲಿ ಜಿಲ್ಲಾಡಳಿತ ಯಾವಾಗ ಸ್ಪಂದಿಸುತ್ತದೆ? ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.
ಕ್ರೀಡಾ ವಸತಿ ನಿಲಯದಲ್ಲಿನ ಅವ್ಯವಸ್ಥೆ ಕುರಿತು ವಿದ್ಯಾರ್ಥಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.
"ನಾವು ಕ್ರೀಡೆಯಲ್ಲಿ ಸಾಧನೆ ಮಾಡಬೇಕು ಎಂದು ಇಲ್ಲಿ ವಾಸಿಸುತ್ತಿದ್ದೇವೆ. ಆದರೆ ಮೂಲಭೂತ ಸೌಕರ್ಯಗಳೇ ಇಲ್ಲದ ಪರಿಸ್ಥಿತಿ ಎದುರಾಗಿದೆ. ಕುಡಿಯುವ ನೀರು, ಸ್ವಚ್ಛ ಶೌಚಾಲಯ ವ್ಯವಸ್ಥೆ ಸರಿಯಾಗಿ ಇಲ್ಲ. ಕೊಠಡಿಗಳಲ್ಲೂ ಸ್ವಚ್ಛತೆ ಕೊರತೆ ಇದೆ" ಎಂದು ವಿದ್ಯಾರ್ಥಿಗಳು ದೂರಿದ್ದಾರೆ.
ಇನ್ನೂ ಕೆಲವರು ಆಹಾರ ಸಮಸ್ಯೆಯನ್ನು ಉಲ್ಲೇಖಿಸಿ,
"ನಿಗದಿತ ಮೆನು ಪ್ರಕಾರ ಪೌಷ್ಟಿಕ ಆಹಾರ ನೀಡಲಾಗುತ್ತಿಲ್ಲ. ಹಲವಾರು ದಿನಗಳಿಂದ ಗುಣಮಟ್ಟ ಕಡಿಮೆ ಇರುವ ಊಟ ನೀಡಲಾಗುತ್ತಿದೆ. ತರಕಾರಿ, ಹಣ್ಣು, ಮೊಟ್ಟೆ ಸೇರಿದಂತೆ ಪೌಷ್ಟಿಕಾಂಶಯುಕ್ತ ಆಹಾರ ಸಿಗುತ್ತಿಲ್ಲ" ಎಂದು ಅಳಲು ತೋಡಿಕೊಂಡಿದ್ದಾರೆ.

"ನಾವು ಜಿಲ್ಲೆಯನ್ನು ಪ್ರತಿನಿಧಿಸುವ ಕ್ರೀಡಾಪಟುಗಳು. ಸರಿಯಾದ ಆಹಾರ ಮತ್ತು ವಸತಿ ಸೌಲಭ್ಯಗಳಿಲ್ಲದೆ ಅಭ್ಯಾಸ ಮಾಡಲು ಕಷ್ಟವಾಗುತ್ತಿದೆ. ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ" ಎಂದು ಮತ್ತೊಬ್ಬ ವಿದ್ಯಾರ್ಥಿ ತಿಳಿಸಿದ್ದಾರೆ.ಕೆಲವರು ಆಡಳಿತದ ನಿರ್ಲಕ್ಷ್ಯವನ್ನು ಟೀಕಿಸಿ,
"ಸಮಸ್ಯೆಗಳ ಬಗ್ಗೆ ಹಲವು ಬಾರಿ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಆದರೆ ಯಾರೂ ಗಮನ ಹರಿಸುತ್ತಿಲ್ಲ. ಅದಕ್ಕಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಬೇಕಾದ ಪರಿಸ್ಥಿತಿ ಬಂದಿದೆ" ಎಂದು ಬೇಸರ ವ್ಯಕ್ತಪಡಿಸಿದ್ದಾರೆ.
"ನಮಗೆ ಬೇಕಿರುವುದು ವೈಭವವಲ್ಲ ಕನಿಷ್ಠ ಮೂಲಸೌಲಭ್ಯಗಳು, ಪೌಷ್ಟಿಕ ಆಹಾರ ಮತ್ತು ಅಭ್ಯಾಸಕ್ಕೆ ಸೂಕ್ತ ವಾತಾವರಣ ಮಾತ್ರ. ಜಿಲ್ಲಾಡಳಿತ ತಕ್ಷಣ ಕ್ರಮ ಕೈಗೊಳ್ಳಬೇಕು" ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

# ಡ್ರೋನ್ ಮೂಲಕ ಆಗಸದಲ್ಲಿ ಹಂಪಿ ಇತಿಹಾಸ ಸೃಷ್ಟಿ



**ಬಳ್ಳಾರಿ, ಫೆ.14:** ಹಂಪಿ ಉತ್ಸವದ ಉದ್ಘಾಟನೆಯ ನಂತರ ಎಂ.ಪಿ.ಪ್ರಕಾಶ್ ವೇದಿಕೆ ಮುಂಭಾದಲ್ಲಿ ಮೊದಲ ಬಾರಿಗೆ ಆಗಸದಲ್ಲಿ ಡ್ರೋನ್ ಶೋ ಮೂಲಕ ವಿಜಯನಗರದ ಗತವೈಭವವನ್ನು ಅನಾವರಣಗೊಳಿಸಿತು.

.ನೂರಾರು ಡ್ರೋನ್ಗಳು ಕಲ್ಲಿನ ರಥ, ವಿರೂಪಾಕ್ಷ ದೇವಾಲಯ, ಉಗ್ರ ನರಸಿಂಹನ ಮೂರ್ತಿಗಳನ್ನು ಕಲಾತ್ಮಕವಾಗಿ ಬಿಂಬಿಸಿದವು.ಕನ್ನಡಿಗರ ಹೆಮ್ಮೆಯ ಅರಸ ಶ್ರೀ ಕೃಷ್ಣದೇವರಾಯರ ಭಾವಚಿತ್ರವು ಆಕಾಶದಲ್ಲಿ ಮೂಡಿಬಂದಾಗ ಜನರಿಂದ ಹರ್ಷೋದ್ಗಾರ ವ್ಯಕ್ತವಾಯಿತು. ದರೋಜಿ ಕರಡಿ ಧಾಮ ಮತ್ತು ಬಡವಿ ಲಿಂಗದ ಚಿತ್ರಣಗಳು ಪ್ರದರ್ಶನದ ಮೆರುಗನ್ನು ಹೆಚ್ಚಿಸಿದವು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಜನಪ್ರತಿನಿಧಿಗಳ ಭಾವಚಿತ್ರವನ್ನು ಡ್ರೋನ್ ಮೂಲಕ ಬಾನಂಗಳದಲ್ಲಿ ಮೂಡಿಸಲಾಯ್ತು. ಕೊನೆಯದಾಗಿ ದಿವಂಗತ ನಟ ಪುನೀತ್ ರಾಜಕುಮಾರ್ ಚಿತ್ರವೂ ಮೂಡಿದಾಗ ನೆರೆದವರ ಕೇಕೆ ಮುಗಿಕು ಮುಟ್ಟಿತ್ತು.ಎ.ಐ.ಆರ್. ಪಿಕ್ಸಲ್ ಕಂಪನಿಯ ತಂತ್ರಜ್ಞರು ದ್ರೋಣ್ಗಳ ಸಂಯೋಜನೆಯ ನಿರ್ವಹಣೆ ಮಾಡಿದರು. ಉತ್ಸವ 3 ದಿನಗಳ ಕಾಲವೂ ದ್ರೋಣ್ ಶೋ ನಡೆಯಲಿದೆ.

# ಉಪಹಾರದ ಗುತ್ತಿಗೆಯ ಟೆಂಡರ ರದ್ದುಪಡಿಸಿ




**ಕಲಬುರಗಿ :ಫೆ.14:** ನಗರದ ಸಪಾಯಿ ಕರ್ಮಚಾರಿಗಳಿಗೆ ಬೆಳಿಗ್ಗೆ ನೀಡುತ್ತಿರುವ ಉಪಹಾರದ ಗುತ್ತಿಗೆಯ ಟೆಂಡರ ರದ್ದುಪಡಿಸಿ ಸೂಕ್ತ ಗುತ್ತಿಗೆದಾರರಿಗೆ ವಹಿಸಿಕೊಡಬೇಕೆಂದು ಜೈ ಕನ್ನಡಿಗರ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ: ದತ್ತು ಹೆಚ್ ಭಾಸಗಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.
ಈಗಾಗಲೇ ಕಲಬುರಗಿ ನಗರದ ಸಪಾಯಿ ಕರ್ಮಚಾರಿಗಳಿಗೆ ಬೆಳಿಗ್ಗೆ ನೀಡುತ್ತಿರುವ ಉಪಹಾರದಲ್ಲಿ ತುಂಬಾ ಅವ್ಯವಹಾರ ನಡೆಯುತ್ತಿದ್ದು, ತಮ್ಮ ಲಿಸ್ಟ (ಮೆನ್ಯು) ಪ್ರಕಾರ ನೀಡದೆ ಮೊಟ್ಟೆ, ನೀಡುತ್ತಿಲ್ಲ, ಚಹಾ ನೀಡುತ್ತಿಲ್ಲ, ಉತ್ತಮ ಗುಟಣಮಟ್ಟದ ಸಾಂಬರ ಬಳಸುತ್ತಿಲ್ಲ, ಅನ್ನ ಸಹ ನೀಡುತ್ತಿಲ್ಲ. ಇದು ಸುಮಾರು ವರ್ಷಗಳಿಂದ ಮುಂದುವರೆದುಕೊಂಡು ಬರುತ್ತಿದ್ದು, ಇದರಲ್ಲಿ ಗುತ್ತಿಗೆದಾರರು ಹಾಗೂ ಕಛೇರಿ ಸಿಬ್ಬಂಧಿಗಳು ಹಣದ ಗೊಲಮಾಲ ನಡೆಸುತ್ತಿದ್ದು, ಹೀಗಾಗಿ ಸಫಾಯಿ ಕರ್ಮಚಾರಿಗಳು ಪ್ರತಿ ನಿತ್ಯ ಕೆಲಸ ನಿರ್ವಹಿಸಿ, ದೈಹಿಕವಾಗಿ ಕುಗ್ಗುತ್ತಿದ್ದಾರೆ.
ಈಗಾಗಲೇ ದಿನಾಂಕ 12/02/2026 ರಂದು ಒಬ್ಬ ಸಫಾಯಿ ಕರ್ಮಚಾರಿ ಮಹಿಳೆ ಗೋವಾ ಹೊಟೆಲ್ ಎದರುಗಡೆಯ ಮಹಾನಗರ ಪಾಲಿಕೆ ಕಛೇರಿ ಎದರುಗಡೆ ಉಪಹಾರ ಸಿಗದ ಮೂರ್ಛೆ ಹೋಗಿ ಬಿದ್ದಿದ್ದು, ಅದರ ಚಿತ್ರ ಮೊಬೈಲ್‌ನಲ್ಲಿ ಸೆರೆ ಹಿಡಿಯಾಲಗಿದ್ದು, ತಾವು ಬಯಸಿದ್ದಲ್ಲಿ ಅದನ್ನು ಪ್ರಚುರಪಡಿಸಲು ಸಿದ್ದರಿರುತ್ತೇವೆ.
ಕಾರಣ ಈ ನಮ್ಮ ಮನವಿ ಅರ್ಜಿಯನ್ನು ಪರಿಶೀಲಿಸಿ ಮೇಲೆ ತಿಳಿಸಿದ ಉಪಚಾರದ ಟೆಂಡರ ಹಿಡಿದ ಗೌಸ, & ಈರಣ್ಣ ಇವರಿಬ್ಬರ ವಿರುದ್ಧ ಸೂಕ್ತ ಕ್ರಮ ಕೈಕೊಂಡು ಈ ಎರಡು ಟೆಂಡರ ರದ್ದುಪಡಿಸಿ, ಅವರ ಗುತ್ತಿಗೆ ಪ್ರಮಾಣ ಪತ್ರ ಕಪ್ಪು ಪಟ್ಟಿಗೆ ಸೇರ್ಪಡೆ ಮಾಡಿ ಮುಂದೆ ಉತ್ತಮ ಗುಣಮಟ್ಟದ ಉಪಹಾರು ನೀಡುವ ಗುತ್ತಿಗೆದಾರರ ಟೆಂಡರ ವಹಿಸಿಕೊಡಲು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ. ಒಂದು ವೇಳೆ (7) ದಿವಸದೊಳಗಾಗಿ ಕ್ರಮ ಕೈಕೊಳ್ಳದೆ ಹೋದಲ್ಲಿ ಸಂಘಟನೆ ವತಿಯಿಂದ ಹಂತ ಹಂತವಾಗಿ ಉಗ್ರ ಸರೂಪದ ಪ್ರತಿಭಟನೆಯನ್ನು ಮಹಾನಗರ ಪಾಲಿಕೆ ಕಛೇರಿ ಎದರುಗಡೆ ನಡೆಸಬೇಕಾಗುತ್ತದೆ ಎಂದು ಮನವಿಯಲ್ಲಿ ತಿಳಿಸಿದಾರೆ. ಈ ಸಂದರ್ಭದಲ್ಲಿ: ದಿಲೀಪ ಕುಮಾರ ಯಲಪಳ್ಳಿ, ಉಷಾನ, ಸಂಜು ಮಾಳಿಗಿ, ವಿಜಯಕುಮಾರ ಮಾಳಗೆ, ಶರಣು ಕಮಕನೂರ, ಹಾಜರಿದ್ದರು

# ಮುಡಬಿ ಮುಕುಟಕ್ಕೆ ಸರ್ವಾಧ್ಯಕ್ಷರ ಪಟ್ಟ ಮತ್ತೊಂದು ಗರಿ: ಅಶೋಕರಡ್ಡಿ ಚಿಲುಮೆ

**ಸೇಡಂ ,ಫೆ ,14:** ಸಾಹಿತ್ಯ ಎಂದರೆ ಕೇವಲ ಕವನ, ಕಥೆ, ಕಾದಂಬರಿ, ನಾಟಕಗಳ ಸಂಗ್ರಹವಲ್ಲ. ಇದು ಮನುಷ್ಯನ ಅನುಭವಗಳ, ಭಾವನೆಗಳ ಮತ್ತು ತಮ್ಮೊಳಗಿನ ವಿಚಾರಗಳನ್ನು ವ್ಯಕ್ತಗೊಳಿಸುವ ಒಂದು ಮಾರ್ಗ, ಸಾಹಿತ್ಯ ನಮ್ಮ ಅಕ್ಕ ಪಕ್ಕದ ಜೀವನವನ್ನು ಪ್ರತಿಬಿಂಬಿಸುತ್ತದೆ. ಸಾಹಿತ್ಯ ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಗಳನ್ನು ಉಳಿಸುತ್ತದೆ.ಶರಣ ಸಾಹಿತ್ಯ, ಜಾನಪದ ಸಾಹಿತ್ಯದ ಪರಂಪರೆಯನ್ನು ಮೈಗೂಡಿಸಿಕೊಂಡಿರುವ ಸಾಹಿತಿ, ಇತಿಹಾಸ ತಜ್ಞ, ಸಂಶೋಧಕರಾದ ತ್ರಿಮೂರ್ತಿ ಶ್ರೀ ಮುಡಬಿ ಗುಂಡೇರಾವ ಅವರಿಗೆ ಒಲಿದ ಬಂದ 22 ನೇ ಕಲಬುರಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಪಟ್ಟ.ಈ ಸುದ್ಧಿ ತಿಳಿದು ಕಲಬುರಗಿ ಜಿಲ್ಲೆಯ ಸಾಹಿತ್ಯಾಸಕ್ತರು ಪುಳಕಿತಗೊಂಡಿದ್ದಾರೆ.ಸೇಡಂ ತಾಲೂಕಿನಲ್ಲಿ ಮುಡಬಿ ಎಂದರೆ ಕನ್ನಡಾಂಬೆಯ ಸುಪುತ್ರ ಎಂದು ಕನ್ನಡಾಭಿಮಾನಿಗಳು ಹೆಮ್ಮೆಯಿಂದ ಹೇಳುತ್ತಾರೆ.ಗುಂಡೇರಾವ ವ್ಯಕ್ತಿಯಲ್ಲ ಕನ್ನಡದ ಶಕ್ತಿ ಎಂದರೆ ಅತಿಶೋಯುಕ್ತಿಯೇನಲ್ಲ.ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಹೊಡಲ್ ಗ್ರಾಮದ ಮಹಾಂತಬಾಯಿ ಮತ್ತು ಅಂಬರಾಯ ಪೋಲಿಸ ಪಾಟೀಲ ದಂಪತಿಗಳ ಕರುಳಿನ ಕುಡಿಯಾಗಿ 01/06/1967 ರಂದು ಜನ್ಮತಾಳಿದ ಗುಂಡೇರಾವ ಸರಳ ಸ್ವಭಾವದ ಮೇರು ವ್ಯಕ್ತಿತ್ವ.ಸೇಡಂ ತಾಲೂಕಿನ ಪ್ರತಿ ಹಳ್ಳಿ ಹಳ್ಳಿಗೂ ಕನ್ನಡದ ರಥ ಎಳೆದ ಕೀರ್ತಿ ಮೂಡಬಿಯವರದು.2008 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸೇಡಂ ಘಟಕದ ಅಧ್ಯಕ್ಷರಾದ ನಂತರ ಕನ್ನಡ ಭಾಷೆಯ ಬೆಳವಣಿಗೆಗೆ ಅವಿರತವಾಗಿ ಶ್ರಮಿಸಿದ್ದಾರೆ.
ಕಸಾಪ ನಡೆ–ಹಳ್ಳಿ ಕಡೆ, ಶಾಲೆಗೊಂದು ಕಾರ್ಯಕ್ರಮ, ಕಾಲೇಜು ವಿದ್ಯಾರ್ಥಿಗಳಲ್ಲಿ ಕನ್ನಡದ ಕಿಚ್ಚು ಹೊತ್ತಿಸುವ ಉಪನ್ಯಾಸ ಮಾಲಿಕೆಗಳು ಮನೆ ಅಂಗಳದಲ್ಲಿ ಕವಿ ಪರಿಚಯ ಹೀಗೆ ಮೂರು ವರ್ಷಗಳಲ್ಲಿ 300 ಕಾರ್ಯಕ್ರಮಗಳು ಆಯೋಜಿಸಿದ ಅಪ್ಪಟ ಕನ್ನಡಿಗ,ಸೇಡಂ ತಾಲೂಕಾ 4 ನೇ ಸಾಹಿತ್ಯ ಸಮ್ಮೇಳನ



ಯಶಸ್ವಿಯಾಗಿ ನಡೆಸಿ ಮೂರು ವರ್ಷಗಳ ಸಾಧನಾ ಸಮಾವೇಶ ಸೇಡಂ ಜನತೆಯ ಮನಸ್ಸಿನಲ್ಲಿ ಇನ್ನು ಹಚ್ಚ ಹಸಿರಾಗಿಯೇ ಉಳಿದಿದೆ.ಸಂಶೋಧಕ ಮುಡಬಿ: ಕಲಬುರಗಿ ಜಿಲ್ಲೆಯಲ್ಲಿ ಹಲವಾರು ಈತಿಹಾಸಿಕ ಸ್ಥಳಗಳಿವೆ. ಕಲಬುರಗಿ ಕೋಟೆ, ಹಫ್ ಗುಂಬಜ್,ಶ್ರೀ ಶರಣಬಸವೇಶ್ವರ ದೇವಾಲಯ, ಬಂದೇನವಾಜ್ ದರ್ಗಾ,ಬುದ್ಧ ವಿಹಾರ ಇಂತಹ ಪರಿಸರದಲಿ ಅಧ್ಯಯನ ಮಾಡಿದ ಇವರು ಸೇಡಂ ತಾಲೂಕಿನಲ್ಲಿರುವ ಪ್ರತಿಯೊಂದು ಐತಿಹಾಸಿಕ ಸ್ಥಳಗಳ ಬಗ್ಗೆ ಲೇಖನಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಯುವಕರಿಗೆ ಐತಿಹಾಸಿಕ ಸ್ಥಳಗಳ ಕುರಿತು ಆಸಕ್ತಿ ಮೂಡಿಸುವಲ್ಲಿ ಸಫಲರಾಗಿದ್ದಾರೆ. ವಿಶೇಷವಾಗಿ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ (ಮಳಖೇಡ ) ದ ಕೋಟೆ ಒಂದೊಂದು ಕಲ್ಲಿನ ಬಗ್ಗೆಯೂ ಆಳವಾದ ಅಧ್ಯಯನ ಮಾಡಿದಲ್ಲದೆ ಯುವ ಪೀಳಿಗೆಗೆ ಜ್ಞಾನ ಧಾರ ಎರೆದಿದ್ದಾರೆ. ಮಾನ್ಯ ಸಚಿವರಾದ ಎಚ್. ಕೆ ಪಾಟೀಲರು ಮಳಖೇಡಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ರಾಷ್ಟ್ರಕೂಟರ ಇತಿಹಾಸ,ಪರಂಪರೆ, ಸಂಸ್ಕೃತಿಯ ಪರಿಚಯ ಮಾಡಿಕೊಟ್ಟಿದ್ದು ಅವಿಸ್ಮರಣೀಯ.ಸೇಡಿಂಬ ದುರ್ಗದ ಶಾಸನಗಳು,ಸೇಡಂ ತಾಲೂಕು ದರ್ಶನ,ಮುನ್ನೀರ ಸಾಸಿ ನಾಡು, ಕಾಳಗಿ ಕಾಳೇಶ್ವರ ಸಂಶೋಧನಾತ್ಮಕ ಕೃತಿಗಳು ರಚಿಸಿದ್ದಾರೆ. ತಾಲೂಕಿನಾದ್ಯಂತ ವಿದ್ಯಾರ್ಥಿಗಳ ತಂಡದೊಂದಿಗೆ ಕೊತ್ತಲ ಬಸವೇಶ್ವರ ದೇವಾಲಯ, ಪಂಚಲಿಂಗೇಶ್ವರ ಮಂದಿರ, ಬಿಜನಳ್ಳಿಯ ಮಹಾಶರಣ ಹರಳಯ್ಯ ಕಲ್ಯಾಣಮ್ಮನವರು ವಿಶ್ವ ಗುರು ಬಸವಣ್ಣನವರಿಗೆ ಒಪ್ಪಿಸಿದ ಚಮಾವುಗೆಗಳು, ಹಂದರಕಿಯಲ್ಲಿ ರಾಷ್ಟ್ರಕೂಟರ ಅರಸ 6 ನೇ ವಿಷ್ಣುವರ್ಧನನ ಕಾಲದ ಲೋಕೇಶ್ವರ ಮತ್ತು ಅನೇಶ್ವರ ದೇವಾಲಯ, ಮೋತಕಪಲ್ಲಿಯ ಬಲ ಭೀಮಸೇನ ದೇವಾಲಯ ಹೀಗೆ ಹತ್ತಾರು ಸ್ಥಳಗಳಿಗೆ ಭೇಟಿ ನೀಡಿ ಇತಿಹಾಸದ ಅರಿವು ಮೂಡಿಸಿದ ಹೆಗ್ಗಳಿಕೆ ಮುಡಬಿಯವರಿಗೆ ಸಲ್ಲುತ್ತದೆ.ಸುಮಾರು 25 ಕ್ಕೂ ಹೆಚ್ಚು ಕೃತಿಗಳು ರಚಿಸಿರುವ ಇವರು ಕನ್ನಡ ಭಾಷೆ ನೆಲ–ಜಲ ಹೋರಾಟದಲ್ಲಿ ಮೂಂಚುಣಿಯಲ್ಲಿರುತ್ತಾರೆ. ಇಂತಹ ಬಹುಮುಖ ಪ್ರತಿಭೆಗೆ 22 ನೇ ಕಲಬುರಗಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಪಟ್ಟ ದಕ್ಕಿದು ಮುಡಬಿ ಮುಕುಟಕ್ಕೆ ಮತ್ತೊಂದು ಗರಿ ಲಭಿಸಿದು ಶಿಕ್ಷಣ ಇಲಾಖೆಗೆ ಸಂತೋಷ ಸಂಗತಿ.
ಅಶೋಕರಡ್ಡಿ ಚಿಲುಮೆ
ಮುಖ್ಯ ಶಿಕ್ಷಕರು ಸರಕಾರಿ ಪ್ರೌಢ ಶಾಲೆ ಕೋಲಕುಂದಾ

# ಹಂಪಿ ಉತ್ಸವದಲ್ಲಿ ಟಗರು ಸಾಂಗ್ ಗೆ ಹೆಜ್ಜೆ ಹಾಕಿದ ಶಿವರಾಜ್ ಕುಮಾರ್

**ಹಂಪಿ, ಫೆ.14:** ಉತ್ಸವದ ಮೊದಲ ದಿನವಾದ ನಿನ್ನೆ ಎಂ.ಪಿ ಪ್ರಕಾಶ್ ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ನಂತರ ನಟ ಶಿವ ರಾಜಕಮಾರ್ 'ಟಗರು ಬಂತು ಟಗರು' ಹಾಡಿಗೆ ಹೆಜ್ಜೆ ಹಾಕುವ ಮೂಲಕ ನೆರೆದಿದ್ದ ಜನಸ್ತೋಮಕ್ಕೆ ರಂಜನೆ ನೀಡಿದರು.

ಬಳಿಕ 1986 ರಲ್ಲಿ ತೆರೆಕಂಡಿದ್ದ ತಾವೇ ನಟಿಸಿದ ಮತ್ತು ಎಸ್.ಪಿ.ಬಾಲಸುಬ್ರಹ್ಮಣ್ಯ ಗಾಯನದ. ರಥ ಸಪ್ತಮಿ ಚಿತ್ರದ 'ನೀ ಯಾರು, ನಾ ಯಾರೋ' ಹಾಡು ಹಾಡುವ ಮೂಲಕ ಕೇಳುಗರನ್ನು ಗಾನ ಲಹರಿಯಲ್ಲಿ ತೇಲಾಡಿಸಿದರು.ನಂತರ 1996ರ 'ಜನುಮದ ಜೋಡಿ' ಚಿತ್ರದ ಎಲ್.ಎನ್.ಶಾಸ್ತ್ರಿ ಹಾಡಿರುವ 'ಕೋಲುಮಂಡೆ ಜಂಗಮ' ಹಾಡು ಹಾಡಿ ನೃತ್ಯ ಮಾಡಿ ನೆರೆದ ಅಭಿಮಾನಿಗಳ ಮನಸೂರೆಗೊಂಡರು.



ಸುದ್ದಿ ಮತ್ತು
ಜಾಹೀರಾತಿಗಾಗಿ ಸಂಪರ್ಕಿಸಿ
6360866626

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE